ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)
ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-೧೯. ದೂರವಾಣಿ : (080) 26602802; 26611011

**ಸಂಪಾದಕರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ**

ಸಂಪುಟ -೨ ಸಂಚಿಕೆ –೧೦ ವಿರೋಧಿ (ಮಾರ್ಗಶೀರ್ಷ-ಪುಷ್ಯ) ಡಿಸೆಂಬರ್ ೨೦೦೯

## ಶ್ರೀವ್ಯಾಸ ಸೂಕ್ತಿ

**ಯೇ ಸ್ತೇಯಾನೃತಡಂಭೇರ್ಷ್ಯಾಹಿಂಸಾಮಾನವಿವರ್ಜಿತಾಃ ।**
**ನ ತೇಷಾಂ ಸತ್ಯಶೀಲಾನಾಮಾಶಿಷೋ ವಿಫಲಾಃ ಕ್ವಚಿತ್ ॥**

- ಶ್ರೀಮದ್ಭಾಗವತ (೧೦/೮/೧೫)

ಕಳ್ಳತನ, ಸುಳ್ಳು, ಸೊಕ್ಕು, ಅಸೂಯೆ, ಹಿಂಸೆಗಳನ್ನು ತೊರೆದ ಸತ್ಯವ್ರತರಾದ ಸತ್ಪುರುಷರ ಹರಕೆಗಳು ಎಂದೂ ಸಹ ಸುಳ್ಳಾಗವು.

## ಶ್ರೀಮಧ್ವ ಸೂಕ್ತಿ

**ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥**

- ಮಹಾಭಾರತತಾತ್ಪರ್ಯನಿರ್ಣಯ (೧/೮೪)

ಮಾಹಾತ್ಮ್ಯಜ್ಞಾನಪೂರ್ವಕವಾದ, ಸುದೃಢವೂ, ಅತ್ಯಂತ ಅಧಿಕವೂ ಆದ ಸ್ನೇಹವೇ ಭಕ್ತಿ ಎನ್ನಿಸುವುದು; ಮುಕ್ತಿ ಲಭಿಸುವುದು ಇಂತಹ ಭಕ್ತಿಯಿಂದಲೇ. ಇತರವುಗಳಿಂದಲ್ಲ.

# ವಿಷಯಾನುಕ್ರಮಣಿಕೆ


| | | |
|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | ೧ |
| ೨. | ಹರಿದಾಸರ ಸೂಕ್ತಿರತ್ನಗಳು | ೩ |
| ೩. | ಗಾಯತ್ರೀಭಾಷ್ಯರೂಪಃ ಅಸೌ-೧೦ : ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು | ೪ |
| ೪. | ಶ್ರೀಕೃಷ್ಣನಾಮಾರ್ಥಚಂದ್ರಿಕಾ-೯ : ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು | ೬ |
| ೫. | ಮಮ ಪ್ರಾಣಾಃ : ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು | ೧೦ |
| ೬. | ಸಂಪಾದಕೀಯ – ಮಧ್ವಶಾಸ್ತ್ರದ ಸ್ಥೂಲ ಪರಿಚಯಕ್ಕೆ ಅಗತ್ಯ ಅಧ್ಯಯನ | ೧೧ |
| ೭. | ಪಾಪಪುರುಷನ ದಹನಾದಿಗಳ ಅನುಸಂಧಾನ:ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೪ |
| ೮. | ಶ್ರೀವಿಜಯದಾಸರ ಸುಳಾದಿಯಲ್ಲಿ ನಾರಾಯಣಕವಚ : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೧೭ |
| ೯. | ಶ್ರೀರಘೂತ್ತಮತೀರ್ಥರ ಹಿರಿಮೆ : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೨೧ |
| ೧೦. | ಶ್ರೀಮಧ್ವರು ಕಂಡ ಮಹಾಭಾರತ : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೨೪ |
| ೧೧. | ರಾಮಾಯಣ ಹಾಗೂ ಮಹಾಭಾರತದಲ್ಲಿ ದಿಕ್ಪಾಲಕರು ಹಾಗೂ ನವಗ್ರಹಗಳು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೦ |
| ೧೨. | ಧನುರ್ಮಾಸ ಮಹಿಮಾ : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೨ |
| ೧೩. | ಧನುರ್ಮಾಸದ ವಿಶೇಷನಿಯಮಗಳು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೬ |
| ೧೪. | ಚಂದ್ರಗ್ರಹಣ | ೩೭ |
| ೧೫. | ಸೂರ್ಯಗ್ರಹಣ | ೩೮ |
| ೧೬. | ಗ್ರಹಣಕಾಲದ ವಿಶೇಷ ನಿಯಮಗಳು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ | ೪೦ |
| ೧೭. | ಮಾಸದ ವಿಶೇಷಗಳು | ೪೩ |


*****

## ಚಂದಾ ವಿವರ

ಆಜೀವಚಂದಾ : ರೂ ೫೦೦೦
ಪಂಚವಾರ್ಷಿಕ ಚಂದಾ : ರೂ ೫೦೦; ಬಿಡಿ ಪ್ರತಿ : ರೂ ೧೦

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯ-ನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

## ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

### ಶ್ರೀವ್ಯಾಸರಾಜರ ಸೂಕ್ತಿರತ್ನಗಳು

ರಾಗ : ಕಾಂಬೋದಿ ತಾಳ: ಝಂಪೆ

ಬಿಗಿಯದಿರು ಬಿಗಿಯದಿರು ಎಲೆ ಮಾನವಾ
ಧಿಗಿ ಧಿಗಿ ಧಿಗಿಯೆನುತ ನಿನಗೇಕೆ ಗರ್ವ ॥ ಪ ॥

ವಿರಕ್ತಿಯಲಿ ಹನುಮನೆ ವಿವೇಕದಲಿ ವಸಿಷ್ಠನೆ
ಶೂರತನದಲಿ ಶಂತನು ತನಯನೇನೊ ।
ಸ್ವರದಲಿ ತುಂಬುರನೆ ಗೀತದಲಿ ನಾರದನೆ ಪರಾ-
ಶರಮುನಿಯೆ ವ್ರತತಿಪಟ್ಟದಲ್ಲಿ ॥ ೧ ॥

ಚೆಲುವಿನಲಿ ರಾಮನೆ ಸತ್ಯದಿ ಹರಿಶ್ಚಂದ್ರನೆ
ಛಲದಲ್ಲಿ ಋಷಿ ವಿಶ್ವಾಮಿತ್ರನೇನೊ ।
ಬಲದಲ್ಲಿ ವಾಲಿಯೆ ಹರಧರನೆ ಹಿರಣ್ಯಕನೆ
ಬಿಲು ವಿದ್ಯದಲಿ ಪರಶುರಾಮನೇ ನೀನು ॥ ೨ ॥

ತ್ಯಾಗದಲಿ ಕರ್ಣನೇ ಭೋಗದಲಿ ಶತಮುಖನೆ
ಯೋಗದಲಿ ಶುಕಸನಕಜನಕನೇನೋ ।
ಭಾಗ್ಯದಲಿ ಬಲಿಚಕ್ರವರ್ತಿಯೋ ದಶಶಿರನೊ
ದೀರ್ಘದಲಿ ಮೇರುವೆ ಮಂದರವೇ ನೀನು ॥ ೩ ॥

ಭಕ್ತಿಯಲಿ ಭರತನೆ ಭಾವದಲಿ ಲಕ್ಷ್ಮಣನೆ
ಯುಕ್ತಿಯಲಿ ನೀನಿಂದ್ರಸೂತನೇನೊ ।
ಶಕ್ತಿಯಲಿ ಕಾಲನೆ ಭುಕ್ತಿಯಲಗಸ್ತ್ಯನೆ
ಮುಕ್ತಿ ಪಡೆವಲ್ಲಿ ಖಟ್ವಾಂಗರಾಯನೇನೊ ॥ ೪ ॥

ಶಾಪದಲಿ ಬ್ರಹ್ಮನೆ ತಾಪದಲಿ ಸೂರ್ಯನೆ
ಕೋಪದಲಿ ಮಹೇಶನೇನೋ ನೀನು ।
ತಪದಲ್ಲಿ ಹನುಮನೆ ವ್ರತದಿ ರುಕ್ಮಾಂಗದನೆ
ಕೃಪೆಯಲ್ಲಿ ಶ್ರೀಕೃಷ್ಣದೇವನೆ ನೀನು ॥ ೫ ॥

*****



# ಗಾಯತ್ರೀಭಾಷ್ಯರೂಪಃ ಅಸೌ - ೧೦

(ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು
ಪಲಿಮಾರು ಮಠ, ಉಡುಪಿ.

ವಿರಕ್ತನಾದ ಪರೀಕ್ಷಿತ ಗಂಗಾತೀರಕ್ಕೆ ಬಂದ. ಮಹಾವಿರಕ್ತನಾದ ಶ್ರೀಶುಕಾಚಾರ್ಯರು ಅಲ್ಲಿಗೇ ಧಾವಿಸಿ ಬಂದರು. ಇಬ್ಬರೂ ನಿರಪೇಕ್ಷರು. ಈರ್ವರೂ ನಿಸ್ಪೃಹಸಾಧಕರು. ಆದರೂ ಪರಸ್ಪರ ಸಾಪೇಕ್ಷರು. ಒಬ್ಬರ ಸಾಧನೆ ಮತ್ತೊಬ್ಬರ ಅಧೀನ. ಹಾಗಾಗಿ ಈ ತ್ಯಾಗ ಯೋಗಿಗಳ ಸಮಾಗಮವೂ ಅತ್ಯಪೂರ್ವ, ಅರ್ಥಪೂರ್ಣ. ಸಮಾಗಮದ ಪ್ರಥಮ ಸೋಪಾನವೇ ಕೊಟ್ಟು-ಕೊಳ್ಳುವ ಆತಿಥ್ಯ. ವಿರಕ್ತನಲ್ಲಿ ಕೊಡಲಿಕ್ಕೇನಾದರೂ ಇದ್ದರೆ ''ಕೊಟ್ಟು'' ಎನ್ನಬಹುದು. ಮಹಾವಿರಕ್ತನಿಗೆ ಕೊಳ್ಳುವಂತದ್ದೇನಾದರೂ ಇದ್ದಿದ್ದರೆ ''ಕೊಳ್ಳುವುದು'' ಎನ್ನಬಹುದು. ಈ ವಿರಕ್ತರಲ್ಲಿ ಆತಿಥ್ಯ ಅರ್ಥಶೂನ್ಯವೇ ಸರಿ. ಯಾರು ಏನನ್ನು ನೀಡುವುದು, ಏನನ್ನು ಪಡೆಯುವುದು? ನೀಡುವವನು ವಿರಕ್ತ! ಪಡೆಯುವವನು ಮಹಾವಿರಕ್ತ!! ವಿರಕ್ತನಲ್ಲಿ ನೀಡಲು ಯೋಗ್ಯವಾದ ಭೋಗ್ಯಗಳೇ ಇಲ್ಲ. ಮಹಾವಿರಕ್ತನಲ್ಲಿ ಪಡೆಯಲು ಅಪೇಕ್ಷಿತವಾದ ಪದಾರ್ಥಗಳೇ ಇಲ್ಲ. ಮಹಾವಿರಕ್ತನು ಅತಿಥಿ; ವಿರಕ್ತನು ಆತಿಥೇಯನು. ಆತಿಥ್ಯವಾದರೂ ಹೇಗೆ ತಾನೇ ಸಾಧ್ಯವಾದೀತು? ಈ ಪ್ರಶ್ನೆಗೆ ಸಮರ್ಪಕವಾದ ಪರಿಹಾರ ನೀಡಿದೆ ಈ ಭಾಗವತ.

ವಿರಕ್ತನಾದ ಪರೀಕ್ಷಿತ್ ಮಹಾವಿರಕ್ತರಾದ ಶ್ರೀಶುಕರಿಗೆ ಫಲ-ಕಾಣಿಕೆ ನೀಡಿದ. ಪರೀಕ್ಷಿತ್ ಸರ್ವವನ್ನು ತ್ಯಜಿಸಿದ್ದರೂ ಫಲ-ಕಾಣಿಕೆಯನ್ನು ಕೊಂಡೊಯ್ಯಲು ಮರೆಯಲಿಲ್ಲ. ಯಾವುದು ಆ ಫಲ-ಕಾಣಿಕೆ?

''ತಸ್ಮೈ ಸಪರ್ಯಾಂ ಶಿರಸಾಽಽಜಹಾರ''

ಇದು ಭಾಗವತದ ಉತ್ತರ. ನಾವು ಅರ್ಪಿಸಬೇಕಾದ ಫಲ-ಕಾಣಿಕೆ ಅಂದರೆ ನಮ್ಮ ನಮ್ಮ ಮಸ್ತಕ. ಮಸ್ತಕ ದೊಡ್ಡ ಸಂಪತ್ತು. ಶಿರಸ್ಸಿಗಿಂತ ಮತ್ತೊಂದು ಮಹತ್ತರ ಐಸಿರಿಯಿಲ್ಲ. ಶಿರಸ್ಸಿನಲ್ಲಿ ಏನಿದೆ ಸಿರಿ, ಅನ್ನುವುದಕ್ಕಿಂತ ''ಏನಿಲ್ಲ'' ಎಂಬುದೇ ಚೋದ್ಯ. ''ತಾ ವಾ ಏತಾಃ ಶೀರ್ಷನ್ ಶ್ರಿಯಃ ಶ್ರಿತಾಃ'' - ಸಕಲಸಿರಿಗಳ ಆಸರೆಯೇ ಈ ಶಿರಸ್ಸು. ಸಕಲಜ್ಞಾನೇಂದ್ರಿಯಗಳ ನಿಧಿ; ಪಾಠ-ಪ್ರವಚನಗಳ ತಪಸ್ಸು. 'ತದ್ಧಿ ತಪಃ ತದ್ಧಿ ಜಪಃ'. ಈ ತಪಸ್ಸಿನಲ್ಲಿ

ವಿರಕ್ತಿಯು, ವಿರಕ್ತ-ಮಹಾವಿರಕ್ತರಿಗೂ ನಿಷಿದ್ಧ. ಇಂಥ ಪಾಠ-ಪ್ರವಚನಕ್ಕೆ ಉತ್ತಮಾಂಗವೆನಿಸಿದ ಶಿರಸ್ಸು ಪ್ರಧಾನಾಂಗ. ಮಹಾ ವಿರಕ್ತರ ಪಾದಕ್ಕೆ ವಿರಕ್ತನು ತನ್ನ ಶಿರಸ್ಸನ್ನೇ ಅರ್ಪಿಸಿದ. ಈ ಶಿರಸ್ಸಿನ ಆಸೆಯಿಂದಲೇ ನಿಸ್ಪೃಹವಿರಕ್ತರಾದ ಶ್ರೀಶುಕರ ಆಗಮನ. ಇದೇ ನಿಜವಾದ ಆತಿಥ್ಯ.

''ಗಾಯತ್ರಿ''ಯ ''ಓಂ'' ಶಬ್ದಕ್ಕೆ ಮೂಲ ''ಅವ'' ಎಂಬ ಕ್ರಿಯಾ ಪದ. ''ಇಚ್ಛೆ'' ಎಂದರ್ಥವನ್ನು ಹೇಳುತ್ತೆ. ಶ್ರೀಹರಿಯ ವಿರಕ್ತನಲ್ಲಿ 'ಕೇಳುವ' ಇಚ್ಛೆ ಹುಟ್ಟಿಸಿ ಶಿರಸ್ಸು ಅರ್ಪಿಸುವಂತೆ ಮಾಡಿದ. ಅದೇ ಹರಿವಾಯುಗಳು ಮಹಾವಿರಕ್ತನಲ್ಲಿ ನೆಲೆಸಿ ''ಹೇಳುವ'' ಇಚ್ಛೆ ಮೂಡಿಸಿ ಪ್ರವಚನ ಗಂಗೆಯನ್ನು ಹರಿಸಿದ.

**ಅವತಿ=ಇಚ್ಛತಿ ಇತಿ ಓಂ.**

''ಓಂ'' ಎಂಬ ಶಬ್ದವು ''ಭಗವಂತನು ಪಾಠಪ್ರವಚನಗಳ ಇಚ್ಛೆಯನ್ನು ಮಾಡಿದ ಮಾಡಿಸಿದ'' ಎಂಬುದಾಗಿ ಹೇಳಿ ಭಾಗವತದ ಭಾಷ್ಯವನ್ನು ಮಾಡಿ ತೋರಿಸಿದೆ.

* * * * *


## ಅಂತರ್ಜಾಲದಲ್ಲಿ ಪ್ರವಚನ ಹಾಗೂ ನೇರಪ್ರಸಾರ

**www.livepravachana.com** ಅಂತರ್ಜಾಲ ತಾಣದಲ್ಲಿ ಕಳೆದ ಒಂದು ವರ್ಷದಿಂದ ಪ್ರವಚನಗಳು ಹಾಗೂ ಪಾಠ ನೇರಪ್ರಸಾರವಾಗುತ್ತಿದ್ದು ಬಹಳಷ್ಟು ಮಾಧ್ವರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ. ಈಗ ಕಾರ್ಯಕ್ರಮದ ವಿವರವನ್ನು ಮೊಬೈಲ್ ದೂರವಾಣಿಗೆ ಉಚಿತವಾಗಿ ಕಳುಹಿಸುವ ಸೌಲಭ್ಯವನ್ನು ಪ್ರಾರಂಭಿಸಿದ್ದೇವೆ. ಇದಕ್ಕಾಗಿ **ON LIVEPRAVACHANA** ಎಂದು **09870807070** ಸಂಖ್ಯೆಗೆ **sms** ಕಳುಹಿಸಬೇಕು. ಇದು ಸಂಪೂರ್ಣ ಉಚಿತವಾದ ಸೇವೆ. ಇದರ ಪ್ರಯೋಜನವನ್ನು ಜಿಜ್ಞಾಸುಗಳು ಪಡೆದುಕೊಳ್ಳಬಹುದು.




# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೯

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೆರೆ ಮಠ**

ಬ್ರಹ್ಮವೈವರ್ತಪುರಾಣೋಕ್ತದಿಶಾ ಶ್ರೀಕೃಷ್ಣಶಬ್ದಸ್ಯ ಅನ್ಯೋಽಪ್ಯರ್ಥಃ ವ್ಯಾಖ್ಯಾತುಂ ಶಕ್ಯತೇ । ಕೃಷಿ+ಣಃ = ಕೃಷ್ಣಃ ಇತ್ಯತ್ರ ಕೃಷಿಶಬ್ದಾರ್ಥಃ ಪಾಪಂ ಕ್ಲೇಶಶ್ಚ। ಣಶಬ್ದಾರ್ಥಃ ನಿರ್ಹಾಣಮ್ (ನಿರ್ವಾಣಮ್) । ತಚ್ಚೋಕ್ತಮ್ -

**ಕೋಟಿಜನ್ಮಾರ್ಜಿತೇ ಪಾಪೇ ಕೃಷಿಃ ಕ್ಲೇಶೇ ಚ ವರ್ತತೇ ।**
**ಭಕ್ತಾನಾಂ ಣಶ್ಚ ನಿರ್ಹಾಣೇ(ನಿರ್ವಾಣೇ) ತೇನ ಕೃಷ್ಣಃ ಪ್ರಕೀರ್ತಿತಃ॥**
**ಇತಿ ॥**

ತಥಾಚ ಶ್ರೀಕೃಷ್ಣಶಬ್ದಾರ್ಥಃ ಪಾಪಕ್ಲೇಶನಾಶನಃ ಇತಿ ॥

ಶ್ರೀಕೃಷ್ಣ ಇತ್ಯತ್ರ ಶ್ರೀಶಬ್ದೇನ ಶಚೀ, ಶ್ಯಾಮಲಾ, ಉಷೋದೇವೀ (ಅಶ್ವಿಭಾರ್ಯಾ) ಚ ಪ್ರತಿಪಾದ್ಯಂತೇ । ದ್ರೌಪದೀದೇಹಂ ಅಧಿಷ್ಠಿತಾಸ್ತಾಃ ಸ್ವಸ್ವಪತೀನಾಂ ಯಥಾಕ್ರಮಂ ಇಂದ್ರ-ಯಮ-ದಸ್ರಾಣಾಂ ಸಮಾಶ್ರಯಾತ್ ಶ್ರಿಯ ಇತ್ಯುಚ್ಯಂತೇ । ತಥಾ ಚೋಕ್ತಂ ತಾತ್ಪರ್ಯನಿರ್ಣಯೇ -

**ಆವೇಶಯುಕ್ತಾ ಶಚ್ಯಾಶ್ಚ ಶ್ಯಾಮಲಾಯಾಸ್ತಥೋಷಸಃ ।**
**ತಾಶ್ಚೇಂದ್ರಧರ್ಮನಾಸತ್ಯಸಂಶ್ರಯಾತ್ ಶ್ರಿಯ ಈರಿತಾಃ ॥**
**ಇತಿ ॥**

ಏವಂ ಚ ಶ್ರಿಯಾಂ ಕೃಷ್ಣಃ ಇತಿ ವಿಗ್ರಹಾನುಸಾರೇಣ ಶ್ರಿಯಾಂ = ಶಚೀಶ್ಯಾಮಲೋಷಸಾಂ ಕೃಷ್ಣಃ = ಕ್ಲೇಶನಾಶನಃ ಇತಿ ಶ್ರೀಕೃಷ್ಣಶಬ್ದಾರ್ಥಃ ಪರ್ಯವಸಿತಃ ॥

ಕುರುಸಭಾಯಾಂ ದ್ರೌಪದೀವಸ್ತ್ರಕೇಶಕರ್ಷಣಸಮಯೇ ದ್ರೌಪದೀದೇಹಸ್ಥಾಃ ಶಚೀ, ಶ್ಯಾಮಲಾ, ಉಷೋದೇವೀ ಚ ಕ್ಲೇಶಂ ಗತಾಃ । ಭಾರತೀ ತು ದೇಹಾಭಿಮಾನಾಭಾವಾತ್ ನ ಕ್ಲೇಶಂ ಪ್ರಾಪ್ತಾ । ತದಾ ತಾ ದೇವ್ಯಃ ಮಾನಸಂರಕ್ಷಣಾರ್ಥಂ ಕೃಷ್ಣಂ ಅಸ್ಮರನ್ । ತದಾ ಭಗವಾನ್ ಶ್ರೀಕೃಷ್ಣಃ ಕರುಣಾರ್ದ್ರಹೃದಯಃ ಅಕ್ಷಯಾಂಬರಂ ವಿತೀರ್ಯ ತಾಸಾಂ ಕ್ಲೇಶಂ ಜಹಾರ ।

ತಥಾ ಚೋಕ್ತಮ್ - 'ಯಮಸುತನ ರಾಣಿಗೆ ಅಕ್ಷಯಾಂಬರವಿತ್ತೆ' ಇತಿ । ತಥಾ ಚ ಶ್ರಿಯಾಂ = ಶಚೀಶ್ಯಾಮಲೋಷಸಾಂ ಕೃಷ್ಣಃ = ಕ್ಲೇಶನಾಶನಃ ಇತಿ ಸಾಧೂಕ್ತಮ್ ॥

ಬ್ರಹ್ಮವೈವರ್ತಪುರಾಣಕ್ಕನುಗುಣವಾಗಿ ಶ್ರೀಕೃಷ್ಣಶಬ್ದಕ್ಕೆ ಬೇರೆ ಅರ್ಥವನ್ನು ವಿವರಿಸಬಹುದು.

'ಕೃಷಿ+ಣ = ಕೃಷ್ಣ' ಎಂಬ ಪದದಲ್ಲಿ ಅಡಕವಾದ ಕೃಷಿಶಬ್ದಾರ್ಥ ಪಾಪ ಹಾಗೂ ಕ್ಲೇಶ; 'ಣ'ಶಬ್ದಾರ್ಥ ಪರಿಹಾರ (ನಿರ್ಹಾಣ). ಈ ಅರ್ಥವನ್ನು ಬ್ರಹ್ಮವೈವರ್ತಪುರಾಣವು ವಿವರಿಸಿದೆ :

**ಕೋಟಿಜನ್ಮಾರ್ಜಿತೇ ಪಾಪೇ ಕೃಷಿಃ ಕ್ಲೇಶೇ ಚ ವರ್ತತೇ ।**
**ಭಕ್ತಾನಾಂ ಣಶ್ಚ ನಿರ್ಹಾಣೇ(ನಿರ್ವಾಣೇ) ತೇನ ಕೃಷ್ಣಃ ಪ್ರಕೀರ್ತಿತಃ॥**
**ಇತಿ ॥**

ಒಟ್ಟಿನಲ್ಲಿ ಕೃಷ್ಣಶಬ್ದದ ಅರ್ಥ ಭಕ್ತರ ಪಾಪಕ್ಲೇಶಗಳನ್ನು ದೂರ ಮಾಡುವವನು ಎಂದು.

ಶ್ರೀಕೃಷ್ಣಶಬ್ದದಲ್ಲಿ ಅಡಕವಾದ ಶ್ರೀಶಬ್ದದ ಅರ್ಥ ಶಚೀ, ಶ್ಯಾಮಲಾ ಹಾಗೂ ಅಶ್ವಿನೀದೇವತೆಗಳ ಪತ್ನಿಯಾದ ಉಷೋದೇವಿಯರು ಎಂದು. ದ್ರೌಪದಿಯ ದೇಹವನ್ನು ಅವಲಂಬಿಸಿದ ಈ ದೇವಿಯರು ತಮ್ಮ ತಮ್ಮ ಪತಿಯಂದಿರಾದ ಯಥಾಕ್ರಮವಾಗಿ ಇಂದ್ರ, ಯಮ, ಅಶ್ವಿನೀದೇವತೆಗಳನ್ನೇ ಆಶ್ರಯಿಸಿದ್ದರಿಂದ ಆ ಮೂರು ದೇವಿಯರು 'ಶ್ರೀ' ಎಂಬುದಾಗಿ ಕೀರ್ತಿತರಾಗಿದ್ದಾರೆ. ಶ್ರೀಶಬ್ದಕ್ಕೆ ಈ ಅರ್ಥದ ವಿವರಣೆಯನ್ನು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಕಾಣಬಹುದು -

**ಆವೇಶಯುಕ್ತಾ ಶಚ್ಯಾಶ್ಚ ಶ್ಯಾಮಲಾಯಾಸ್ತಥೋಷಸಃ ।**
**ತಾಶ್ಚೇಂದ್ರಧರ್ಮನಾಸತ್ಯಸಂಶ್ರಯಾತ್ ಶ್ರಿಯ ಈರಿತಾಃ ॥**
**ಇತಿ ॥**

ಈ ಪ್ರಮಾಣವಚನಗಳನ್ನು ಹಾಗೂ 'ಶ್ರಿಯಾಂ ಕೃಷ್ಣಃ' ಎಂಬ ವಿಗ್ರಹವನ್ನು ಸ್ವೀಕರಿಸಿದಾಗ ದೇವಕೀಪುತ್ರನು ಶಚೀ, ಶ್ಯಾಮಲಾ, ಉಷಾದೇವಿಯರಿಗೆ ಕ್ಲೇಶವನ್ನು ದೂರ ಮಾಡಿದವನು ಎಂಬ ಅರ್ಥವು ಶ್ರೀಕೃಷ್ಣಶಬ್ದಕ್ಕೆ ನಿರ್ಧಾರಿತವಾಗುತ್ತದೆ.



ಕುರುಸಭೆಯಲ್ಲಿ ದ್ರೌಪದಿಯ ವಸ್ತ್ರ-ಕೇಶಕರ್ಷಣಕಾಲದಲ್ಲಿ ದ್ರೌಪದಿಯ ದೇಹದಲ್ಲಿ ನೆಲೆಸಿದ ಶಚೀ, ಶ್ಯಾಮಲಾ ಹಾಗೂ ಉಷೋದೇವಿಯರು ಕ್ಲೇಶವನ್ನು ಹೊಂದಿದರು. ಆದರೆ ಆ ದೇಹದಲ್ಲಿರುವ ಭಾರತೀದೇವಿಯರು ದೇಹಾಭಿಮಾನವಿಲ್ಲದಿರುವುದರಿಂದ ಕ್ಲೇಶಕ್ಕೆ ಪಾತ್ರರಾಗಲಿಲ್ಲ. ಇತರದೇವಿಯರು ಮಾನಸಂರಕ್ಷಣೆಗಾಗಿ ಕೃಷ್ಣನನ್ನು ಸ್ಮರಿಸಿದರು. ಆವಾಗ ಕರುಣಾಮೃತದಿಂದ ಸಿಕ್ತಹೃದಯನಾದ ದೇವಕೀಪುತ್ರನು ಅವರಿಗೆ ಅಕ್ಷಯಾಂಬರವನ್ನು ನೀಡಿ ಅವರ ಕ್ಲೇಶವನ್ನು ದೂರ ಮಾಡಿದನು.

'ಯಮಸುತನ ರಾಣಿಗೆ ('ವಾಯುಸುತನ ರಾಣಿಗೆ' ಎಂದು ಹೇಳಲಿಲ್ಲ) ಅಕ್ಷಯಾಂಬರವಿತ್ತೆ' ಎಂಬುದಾಗಿ ದಾಸರು ಉದ್ಗರಿಸಿದ್ದಾರೆ. ಒಟ್ಟಿನಲ್ಲಿ ಹಿಂದೆ ಹೇಳಿದ ಪ್ರಮಾಣಕ್ಕನುಸಾರವಾಗಿ 'ಶ್ರೀ' ಎನಿಸಿದ ಶಚೀ, ಶ್ಯಾಮಲಾ, ಉಷೋದೇವಿಯರಿಗೆ ತುಂಬಿದ ಕುರುಸಭೆಯಲ್ಲಿ ಮಾನಹರಣಪ್ರಸಕ್ತಿ ಬಂದಾಗ ಅಕ್ಷಯಾಂಬರವಿತ್ತು ಮಾನ ಸಂರಕ್ಷಿಸಿ ಅವರ ಕ್ಲೇಶವನ್ನು ದೂರ ಮಾಡಿದವನು ಎಂಬರ್ಥದಲ್ಲಿ ದೇವಕೀಪುತ್ರನಿಗೆ 'ಶ್ರೀಕೃಷ್ಣ'ಶಬ್ದವು ಸಮಂಜಸವಾಗಿದೆ ಎನ್ನಬಹುದು.

ಅಥವಾ 'ಶ್ರಿಯೈ ಕೃಷ್ಣಂ ಯಸ್ಮಾತ್ ಸಃ ಕೃಷ್ಣಃ' ಇತಿ ವಿಗ್ರಹಾನುಸಾರೇಣ ಶ್ರೀಕೃಷ್ಣಶಬ್ದಾರ್ಥಃ ವ್ಯಾಖ್ಯಾತವ್ಯಃ । ಅತ್ರ ಕೃಷ್ಣಶಬ್ದೇನ ಕೃಷ್ಣವರ್ಣಂ ತಮಃ ಗೃಹ್ಯತೇ । ತಥಾಚ ಶ್ರಿಯೈ ಅರ್ಜುನಸ್ಯ ಪ್ರತಿಜ್ಞಾತಜಯದ್ರಥವಧಾಖ್ಯಜಯ-ಸಂಪದೇ ಕೃಷ್ಣಂ ಊರ್ಜಿತಂ ತಮಃ ಯಸ್ಮಾತ್ ಉತ್ಪನ್ನಂ ಸಃ ದೇವಕೀಸೂನುಃ ಶ್ರೀಕೃಷ್ಣ ಇತ್ಯಭಿಧೀಯತೇ । ತಚ್ಚೋಕ್ತಮ್ -

**ತದ್ ದೃಷ್ಟ್ವಾ ಭಗವಾನ್ ಕೃಷ್ಣೋ ಲೋಹಿತಾಯತಿ ಭಾಸ್ಕರೇ ।**
**ಅಜಿತೇ ದ್ರೋಣತನಯೇ ತ್ವಹತೇ ಚ ಜಯದ್ರಥೇ ।**
**ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಮ್ ॥**

- ಇತಿ ಮಹಾಭಾರತತಾತ್ಪರ್ಯನಿರ್ಣಯೇ ॥

ಅಥವಾ 'ಶ್ರಿಯೈ ಕೃಷ್ಣಂ ಯಸ್ಮಾತ್ ಸಃ ಶ್ರೀಕೃಷ್ಣಃ' ಎಂಬ ವಿಗ್ರಹಕ್ಕನುಗುಣವಾಗಿ ಶ್ರೀಕೃಷ್ಣಶಬ್ದಾರ್ಥವನ್ನು ವ್ಯಾಖ್ಯಾನಿಸಬೇಕು.

ಇಲ್ಲಿ ಕೃಷ್ಣಶಬ್ದವು ಕಪ್ಪು ಬಣ್ಣದ ಕತ್ತಲೆ ಎಂಬರ್ಥವನ್ನು ಪ್ರತಿಪಾದಿಸುತ್ತದೆ. ಹೀಗಾಗಿ ಶ್ರಿಯೈ = ಅರ್ಜುನನ ಜಯದ್ರಥವಧರೂಪಜಯಲಕ್ಷ್ಮಿಗಾಗಿ, ಕೃಷ್ಣಂ =

ಕಪ್ಪಾದ ಕತ್ತಲೆಯು, ಯಸ್ಮಾತ್ = ಯಾರಿಂದ, ಉತ್ಪನ್ನಂ = ಉತ್ಪನ್ನವಾಯಿತೋ, ಸಃ = ಆ ದೇವಕೀಪುತ್ರನೇ ಶ್ರೀಕೃಷ್ಣ ಎಂಬುದಾಗಿ ಕೀರ್ತಿತನಾಗಿದ್ದಾನೆ.

ಮಹಾಭಾರತತಾತ್ಪರ್ಯನಿರ್ಣಯದ ಮಾತುಗಳು ಈ ಅರ್ಥವನ್ನೇ ವಿವರಿಸಿದೆ.

ಸೂರ್ಯನು ಅಸ್ತಮಯಹಂತವನ್ನು ತಲುಪುತ್ತಿರಲು, ಅಶ್ವತ್ಥಾಮಾಚಾರ್ಯ-ರನ್ನು ಗೆದ್ದು, ಪದ್ಮವ್ಯೂಹವನ್ನು ಭೇದಿಸಲು ಅರ್ಜುನನಿಂದ ಸಾಧ್ಯವಾಗದಿರುವಾಗ, ಆತನಿಂದ ಜಯದ್ರಥವಧೆಯು ಪ್ರತಿಜ್ಞಾನುಸಾರವಾಗಿ ಸೂರ್ಯಾಸ್ತಮಯದೊಳಗೆ ಅಸಾಧ್ಯವಾಗುತ್ತಿರಲು, ಭಗವಂತನು ಭಕ್ತ ಅರ್ಜುನನ ಜಯಸಂಪತ್ತಿಗಾಗಿ ಪರಪಕ್ಷೀಯರಿಗೆ ಸೂರ್ಯಾಸ್ತಮಯ-ಭ್ರಮೆಯನ್ನುಂಟು ಮಾಡುವ ಸಲುವಾಗಿ ದಟ್ಟವಾದ ಕತ್ತಲೆಯನ್ನು ಸೃಷ್ಟಿಸಿದನು.

ಆಗ ಸೂರ್ಯಾಸ್ತಮಯದ ಭ್ರಮೆಗೊಳಗಾದ ಅಶ್ವತ್ಥಾಮ, ದ್ರೋಣ ಮುಂತಾದವರು ಜಯದ್ರಥನ ರಕ್ಷಣೆವ್ಯಾಪಾರದಿಂದ ವಿರತರಾಗಿ ವಿಶ್ರಮಿಸಿದರು. ಆಗ ಶ್ರೀಕೃಷ್ಣನು ಅರ್ಜುನನಿಗೆ ಜಯದ್ರಥನ ಮೇಲೆ ಬಾಣಪ್ರಯೋಗಿಸಲು ಆದೇಶಿಸಿ ಕೊಲ್ಲಿಸಿದನು. ದಟ್ಟಕತ್ತಲೆಯನ್ನು ನಿವಾರಿಸಿ ಸೂರ್ಯನನ್ನು ತೋರಿಸಿ ಅರ್ಜುನನಿಗೆ ಜಯಲಕ್ಷ್ಮಿಯನ್ನು ಅನುಗ್ರಹಿಸಿದನು. ಹೀಗೆ ಅರ್ಜುನನ ವಿಜಯಲಕ್ಷ್ಮಿಗಾಗಿ ಕಪ್ಪು ಕತ್ತಲೆಯನ್ನು ಸೃಜಿಸಿದ ಶ್ರೀಕೃಷ್ಣನು ಅನ್ವರ್ಥವಾಗಿ ಆ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ ಎನ್ನಬಹುದು. (ಸಶೇಷ)

*****

ಸರಳಭಾಷೆ, ಪ್ರೌಢನಿರೂಪಣೆ, ಗಂಭೀರವಿಷಯ, ಅಡಕವಾದ ಪ್ರತಿಪಾದನೆ, ಸಕಲಪ್ರಮಾಣಗಳಿಗೂ ಅನುಗುಣವಾದ ಚಿಂತನೆ, ಪ್ರಧಾನವಾಗಿ ಅನುಭವಕ್ಕೆ ಒಪ್ಪಿಗೆಯಾಗುವಂತಹ ವಿವೇಚನೆ-ಗಳಿಂದಾಗಿ ಶ್ರೀಮನ್ಮಧ್ವಾಚಾರ್ಯರ ಸರ್ವಮೂಲಗ್ರಂಥಗಳು ತಾತ್ತ್ವಿಕಪ್ರಪಂಚದಲ್ಲಿ ದೇವತೆಗಳಿಂದಲೂ ಮಾನ್ಯವಾದ ಅದ್ಭುತ ಕೃತಿಗಳಾಗಿವೆ. ಅವರು ನಿಜ ಅರ್ಥದಲ್ಲಿ ಅಭಿನವವೇದವ್ಯಾಸರು.



# ಮಮ ಪ್ರಾಣಾಃ

(ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ , ಪಾಂಡವರನ್ನು 'ನನ್ನ ಪ್ರಾಣಗಳು' ಎಂದು ಕರೆದಿದ್ದಾನೆ. ತಮ್ಮ ತಮ್ಮ ಪ್ರಾಣಗಳ ರಕ್ಷಣೆಯನ್ನು ಸಕಲಚೇತನರೂ (ಪಶು - ಪಕ್ಷಿ - ಕ್ರಿಮಿ - ಕೀಟಗಳನ್ನೂ ಒಳಗೊಂಡಂತೆ) ಮಾಡುವುದನ್ನು ಕಂಡಿದ್ದೇವೆ. ಸರ್ವಾತ್ಮನಾ ತನ್ನನ್ನು ಶರಣುಬಂದ ಭಕ್ತರನ್ನು ಭಗವಂತ ಹೀಗೆ ಪರಿಗಣಿಸುವುದು ಆತನ ಭಕ್ತಿಪಾರವಶ್ಯತೆಗೆ ನಿದರ್ಶನ.

ಅಂತಹ ಮತ್ತೊಂದು ನಿದರ್ಶನವನ್ನು ನಾವು ಕಾಣುವುದು ಶ್ರೀಮದ್ಭಾಗವತದಲ್ಲಿ; ಅಂಬರೀಷನ ಪ್ರಸಂಗದಲ್ಲಿ.

ಸುದರ್ಶನಚಕ್ರದ ವಿರುದ್ಧ ರಕ್ಷಣೆಯನ್ನು ಬಯಸಿಬಂದ ದುರ್ವಾಸ ಮಹರ್ಷಿಗಳಿಗೆ ಭಗವಂತ ಉತ್ತರಿಸಿದ್ದು ಹೀಗೆ : **''ಸಾಧವೋ ಹೃದಯಂ ಮಹ್ಯಂ''**. ಯಾವ ಸಜ್ಜನರು ನನ್ನನ್ನು ತಮ್ಮ ಪ್ರಾಣಗಳಂತೆ ಪ್ರೀತಿಸಿದ್ದಾರೋ, ತಮ್ಮ ಸಕಲವನ್ನೂ ನನಗರ್ಪಿಸಿದ್ದಾರೋ, ಅಂತಹವರನ್ನು ನಾನು ನನ್ನ ಪ್ರಾಣಗಳನ್ನೆಂಬಂತೆ ರಕ್ಷಿಸದಿರುವುದು ಏನು ನ್ಯಾಯ !

ಈ ನಿದರ್ಶನದಿಂದಾದರೂ ನಾವು ಆತನನ್ನು ಸರ್ವಾತ್ಮನಾ ಶರಣು ಹೊಂದೋಣ.

*****

**ಶ್ರೀವ್ಯಾಸಮಧ್ವ ಮಾಸಪತ್ರಿಕೆಗೆ ಪೋಷಕರಾಗಿ ಸಹಕರಿಸಿರುವ ಮಹನೀಯರು:**

**ಶ್ರೀ ಡಿ.ಆರ್. ಸತ್ಯನಾರಾಯಣಾಚಾರ್,** ಬೆಂಗಳೂರು

## ಸಂಪಾದಕೀಯ –

# ಮಧ್ವಶಾಸ್ತ್ರದ ಸ್ಥೂಲ ಪರಿಚಯಕ್ಕೆ ಅಗತ್ಯ ಅಧ್ಯಯನ

ಶ್ರೀಮಧ್ವಸಿದ್ಧಾಂತದ ಗ್ರಂಥಗಳನ್ನು ಗುರುಕುಲಗಳಲ್ಲಿ, ವಿದ್ಯಾಪೀಠಗಳಲ್ಲಿ ಅಧ್ಯಯನ ಮಾಡಲಾಗದ ಹಾಗೂ ಅವುಗಳನ್ನು ತಿಳಿಯಲು ಕಾತರಿಸುವ ಆಸ್ತಿಕರ ಸಂಖ್ಯೆ ಗಮನಾರ್ಹವಾಗಿಯೇ ಇದೆ. ಅಂತಹವರಿಗೆ ವಯಸ್ಸು, ಉದ್ಯೋಗ ಮೊದಲಾದ ಕಾರಣಗಳು ಕ್ರಮಬದ್ಧವಾಗಿ ಶಾಸ್ತ್ರಗ್ರಂಥಗಳ ಅಧ್ಯಯನಕ್ಕೆ ಅಡ್ಡಿಯಾಗಿರುತ್ತದೆ. ಲೌಕಿಕವಾಗಿ ಉನ್ನತ ಅಧ್ಯಯನವನ್ನು ನಡೆಸಿ, ವೈಚಾರಿಕ-ಪಕ್ವತೆಯನ್ನು ಪಡೆದ ಅಂತಹ ಜನಗಳಿಗೆ ಸಿದ್ಧಾಂತದ ಪರಿಜ್ಞಾನಕ್ಕಾಗಿ ಅಳವಡಿಸಿಕೊಳ್ಳಬೇಕಾದ ಕ್ರಮವನ್ನು ಹೀಗೆ ಸೂಚಿಸಬಹುದು:

೧) **ಸ್ತೋತ್ರಪಾಠ:** ಶ್ರೀಹರಿವಾಯುಸ್ತುತಿ, ಶ್ರೀವಿಷ್ಣುಸಹಸ್ರನಾಮ, ದ್ವಾದಶ-ಸ್ತೋತ್ರ, ದೇವಪೂಜಾಪದ್ಧತಿ, ಗುರುಸ್ತೋತ್ರಗಳು, ದೇವತಾಸ್ತೋತ್ರಗಳು - ಇವುಗಳನ್ನು ಯಥಾವಕಾಶ ಕಲಿತು ಸಿದ್ಧಾಂತದ ಅಧ್ಯಯನಕ್ಕೆ ಅರ್ಹತೆಯನ್ನು ಪಡೆಯುವುದು.

೨) ಸಂಸ್ಕೃತಭಾಷೆಯ ಹಾಗೂ ಶಾಸ್ತ್ರಪ್ರಮೇಯಗಳ ಸ್ಥೂಲಪರಿಚಯಕ್ಕಾಗಿ **ಕಾವ್ಯಪಾಠ** : ತೀರ್ಥಪ್ರಬಂಧ, ಮಣಿಮಂಜರೀ, ಸುಮಧ್ವವಿಜಯ ಹಾಗೂ ರುಗ್ಮಿಣೀಶವಿಜಯ - ಇವುಗಳನ್ನು ಸಾಧ್ಯವಾದಷ್ಟು ಗುರುಮುಖೇನ ಅಧ್ಯಯನ ಮಾಡುವುದು.

೩) ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳಲ್ಲಿ ಸದಾಚಾರದ ಪರಿಚಯಕ್ಕಾಗಿ ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ ಹಾಗೂ ಜಯಂತೀ-ನಿರ್ಣಯ ಗ್ರಂಥಗಳ ಅಧ್ಯಯನ.

೪) ಸಿದ್ಧಾಂತದ ಸೂಕ್ತಪರಿಚಯಕ್ಕಾಗಿ ಶ್ರೀಮದಾಚಾರ್ಯರ ತತ್ತ್ವಸಂಖ್ಯಾನ, ತತ್ತ್ವವಿವೇಕ, ಕಥಾಲಕ್ಷಣ, ಖಂಡನತ್ರಯ ಹಾಗೂ ವಿಷ್ಣುತತ್ತ್ವವಿನಿರ್ಣಯ ಕೃತಿಗಳನ್ನು ಶ್ರೀಜಯತೀರ್ಥರ ಟೀಕೆಗಳ ಸಮೇತ ಅಧ್ಯಯನ ಮಾಡುವುದು.

೫) ಮಧ್ವಸಿದ್ಧಾಂತದ ಪ್ರಮಾಣಪ್ರಕ್ರಿಯೆಯ ಸೂಕ್ಷ್ಮಪರಿಚಯಕ್ಕಾಗಿ ಶ್ರೀಜಯತೀರ್ಥರ ಪ್ರಮಾಣಪದ್ಧತಿ ಹಾಗೂ ಶ್ರೀಮದಾಚಾರ್ಯರ ಪ್ರಮಾಣಲಕ್ಷಣ ಹಾಗೂ ಅದರ ಶ್ರೀಜಯತೀರ್ಥರ ಟೀಕೆಯ ಆಯ್ದ ಭಾಗಗಳ ಅಧ್ಯಯನ.



೬) ಸಮಗ್ರಸಿದ್ಧಾಂತಪ್ರಮೇಯಗಳ ಹಾಗೂ ಇತಿಹಾಸಪುರಾಣಗಳ ಅಧಿಕೃತ ಪರಿಚಯಕ್ಕಾಗಿ ಮಹಾಭಾರತತಾತ್ಪರ್ಯನಿರ್ಣಯದ ಅಧ್ಯಯನ; ಶ್ರೀಮದ್ಭಾಗವತ-ತಾತ್ಪರ್ಯನಿರ್ಣಯಕ್ಕೆ ಅನುಗುಣವಾಗಿ ಶ್ರೀಮದ್ಭಾಗವತಮಹಾಪುರಾಣದ ಶ್ರವಣ.

ಹೀಗೆ ಆರು ಹಂತಗಳಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದಲ್ಲಿ ಯಾವ ಹಂತದಲ್ಲಾದರೂ ಶ್ರೀಮಧ್ವಸಿದ್ಧಾಂತದ ಅಧಿಕೃತಪರಿಚಯವನ್ನು ಜಿಜ್ಞಾಸುಗಳು ಪಡೆದುಕೊಳ್ಳಲು ಸಾಧ್ಯ.

ಇಂತಹ ಪರಿಜ್ಞಾನ ಆತ್ಮೋದ್ಧಾರಕ್ಕೂ, ನಿತ್ಯಜೀವನದಲ್ಲಿ ಆಚಾರವಿಚಾರಗಳ ಸಂರಕ್ಷಣೆಗೂ ಸಾಧನವಾಗುವುದು. ಅದರೊಂದಿಗೆ ತಮ್ಮ ಆತ್ಮೀಯವಲಯದಲ್ಲಿ, ಆಪ್ತವರ್ಗದಲ್ಲಿ, ಮುಖ್ಯವಾಗಿ ಮನೆಯ ಜನಗಳಲ್ಲಿ ಸಿದ್ಧಾಂತದೀಕ್ಷೆ ಹಾಗೂ ಧರ್ಮದೀಕ್ಷೆಗಳ ಬಗ್ಗೆ ಎಚ್ಚರ ಮೂಡಿಸಲು ಸಹ ಸಾಧ್ಯವಾಗುವುದು. ಅನೇಕರು ಇವುಗಳ ಅಗತ್ಯದ ಬಗ್ಗೆ ಎತ್ತುವ ಜಿಜ್ಞಾಸೆಯನ್ನು ಸೂಕ್ತರೀತಿಯಲ್ಲಿ ತಣಿಸಲು ಸಹ ಇದರಿಂದ ಸಾಧ್ಯ.

ಇಂದಿನ ದಿನಗಳಲ್ಲಿ ಬಹುತೇಕ ಜನ ಮನೆಯಲ್ಲಿ ಮಡಿಮೈಲಿಗೆಗಳ ಪರಿಕಲ್ಪನೆಯೂ ಇಲ್ಲದಂತೆ ಬದುಕುವುದು ಸಾಮಾನ್ಯವೆನ್ನಿಸಿಬಿಟ್ಟಿದೆ. ಎಂಜಲು ಮುಸುರೆಗಳ ಪರಿಕಲ್ಪನೆಯೂ ಇಲ್ಲದೆ ಬದುಕುವ ಜನ ಅಪಾರಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಇದು ಅವರ ಲೌಕಿಕಜೀವನದ ಆರೋಗ್ಯಕರ ಬದುಕಿಗೂ, ಸಮಾಜದ ಆಧ್ಯಾತ್ಮಿಕಸ್ವಾಸ್ಥ್ಯಕ್ಕೂ ಪ್ರಬಲ ಅಡ್ಡಿಯಾಗುತ್ತದೆ. ಮನೆಯ ಜನಗಳು ವೃದ್ಧಿ, ಸೂತಕಗಳನ್ನು ಆಚರಿಸುವಲ್ಲಿ ಸಹ ಸಾಕಷ್ಟು ಹಿಂದೆ ಬಿದ್ದಿದ್ದಾರೆ. ಇನ್ನು ರಜಸ್ವಲೆಯರು ಮನೆಯಲ್ಲಿ ಮೈಲಿಗೆ ಬೆರೆಸದೆ ಇರುವ ನಿದರ್ಶನಗಳಂತೂ ತುಂಬಾ ಅಪರೂಪವೆನ್ನಿಸಿಬಿಟ್ಟಿವೆ. ಇವುಗಳು ಕೇವಲ ಗೊಡ್ಡು ಸಂಪ್ರದಾಯಗಳಲ್ಲದೆ, ಇಹಪರದ ಸಾಧನೆಗೂ ಅಗತ್ಯವಾದ ಧಾರ್ಮಿಕಕಟ್ಟಳೆಗಳು ಎಂಬ ಪರಿಕಲ್ಪನೆಯನ್ನು ಮೇಲೆ ತಿಳಿಸಿದ ಕ್ರಮದ ಪಾಲನೆಯಿಂದ ತೃಪ್ತಿಕರ ಮಟ್ಟದಲ್ಲಿ ಉಳಿಸಿಕೊಳ್ಳಲು ಸಾಧ್ಯ.

ಈ ರೀತಿಯಾಗಿ ಪ್ರಮಾಣ ಪ್ರಮೇಯಗಳ ಸ್ಥೂಲ ಪರಿಕಲ್ಪನೆಯನ್ನು ಪಡೆದವರು ಇಂದಿನ ದಿನಗಳಲ್ಲಿ ಸಾಮಾನ್ಯವೆನ್ನಿಸುತ್ತಿರುವ ಮತಾಂತರ ಮೊದಲಾದ ಪಿಡುಗುಗಳಿಂದ ದೂರವಿರಲು ಸಹ ಸಾಧ್ಯವಾಗುವುದು. ಇತ್ತೀಚಿನ ದಿನಗಳಲ್ಲಿ

ಬೀದಿಗೊಬ್ಬರಂತೆ ಕಂಡುಬರುವ ಢೋಂಗಿಸಂತರ ಮಂಕುಬೂದಿಗೆ ಬಲಿಯಾಗುವುದನ್ನು ಸಹ ಇದರಿಂದ ತಪ್ಪಿಸಿಕೊಳ್ಳಬಹುದು. ವಿಶೇಷಹೊರೆ ಎನ್ನಿಸದ ಈ ಹಂತದ ಅಧ್ಯಯನ ವಿದ್ವಾಂಸರನ್ನು ಗೌರವಿಸಲು, ವಿದ್ವತ್ತಿನ ಮಹತ್ತ್ವವನ್ನು ಅರ್ಥಮಾಡಿಕೊಳ್ಳಲು ಸಹ ಸಾಧನವಾಗುತ್ತದೆ. ಅವಕಾಶ ದೊರೆತಲ್ಲಿ ಉದ್ಗ್ರಂಥಗಳ ಅಧ್ಯಯನದ ಮೂಲಕ ಆಳವಾದ ಪಾಂಡಿತ್ಯವನ್ನು ಪಡೆಯಲು ಸಹ ವಿಶೇಷಪರಿಶ್ರಮ ಪಡಲು ಸಿದ್ಧರಿರುವವರಿಗೆ ನೆರವಾಗುತ್ತದೆ. ಪಂಡಿತರಾಗುವುದಷ್ಟೆ ಅಧ್ಯಯನ ಪ್ರಯೋಜನ ಎಂಬ ತಪ್ಪು ತಿಳುವಳಿಕೆಯನ್ನು ಕಳೆದುಕೊಂಡು, ಆತ್ಮೋದ್ಧಾರ ಜೀವನದಲ್ಲಿ ಮುಖ್ಯ ಎಂಬ ಎಚ್ಚರವನ್ನು ಹೊಂದಲು ಇದು ಅಗತ್ಯ. ಇನ್ನು ಹರಿದಾಸರ ಅಸಂಖ್ಯಕೀರ್ತನೆಗಳು, ಉಗಾಭೋಗಗಳು, ಮುಖ್ಯವಾಗಿ ಹರಿಕಥಾಮೃತಸಾರ ಸಿದ್ಧಾಂತಜ್ಞಾನದ ವಿಶೇಷಪರಿಚಯಕ್ಕೆ ಸ್ತ್ರೀಪುರುಷರಿಬ್ಬರಿಗೂ ವಿಶೇಷನೆರವನ್ನು ನೀಡುತ್ತವೆ. ಈ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನಿಸುವ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ ಎಂಬ ಸತ್ಯವನ್ನು ಜನತೆ ಮನಗಾಣಬೇಕಿದೆ.

ಲೌಕಿಕ ವ್ಯಾಸಂಗದೊಂದಿಗೆ ಸಕಾಲದಲ್ಲಿ ಉಪನಯನವನ್ನು ಮಾಡಿ ದಿನಕ್ಕೆ ಕನಿಷ್ಠ ಅರ್ಧಗಂಟೆಯಿಂದ ಒಂದು ಗಂಟೆಯವರೆಗೆ ಇಲ್ಲಿ ಸೂಚಿಸಿದ ಗ್ರಂಥಗಳನ್ನು ಕ್ರಮವಾಗಿ ಅಧ್ಯಯನ ಮಾಡಿಸುವ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಪ್ರತಿಯೊಬ್ಬ ಮಾಧ್ವವಟುವೂ ತನ್ನ ಲೌಕಿಕ ವೃತ್ತಿಜೀವನವನ್ನು ಆರಂಭಿಸುವ ವೇಳೆಗೆ ಮಧ್ವಸಿದ್ಧಾಂತದ ಹಿರಿಮೆ ಗರಿಮೆಗಳಲ್ಲಿ ನಿಷ್ಠೆ ಉಳ್ಳವನಾಗಿ ಅತ್ಯಂತ ಸುಖಸಂತೋಷದಿಂದ ಬದುಕಲು ಸಾಧ್ಯವಾಗುತ್ತದೆ. ಅದರೊಂದಿಗೆ ತಮ್ಮ ಲೌಕಿಕ ವಿದ್ಯೆಯಲ್ಲಿ ಇತರರಿಗಿಂತ ಹೆಚ್ಚಿನ ಪರಿಣತಿಯನ್ನು ಪಡೆದು ಅಸಾಮಾನ್ಯರ ಸಾಲಿಗೆ ಸೇರುವಂತಾಗುತ್ತದೆ. ಲೌಕಿಕ ಜೀವನದಲ್ಲೂ ಉನ್ನತಪದವಿಯನ್ನು ಈ ಉತ್ತಮ ಸಂಸ್ಕಾರದಿಂದಾಗಿ ಹೊಂದಿ ಭ್ರಷ್ಟಾಚಾರಮುಕ್ತವಾದ ಅಧಿಕಾರವನ್ನು ಸಹ ಹೊಂದಲು ಸಹ ನೆರವಾಗುತ್ತದೆ. ಅಷ್ಟೇ ಮುಖ್ಯವಾಗಿ ಜೀವನದುದ್ದಕ್ಕೂ ದುಶ್ಚಟಗಳಿಂದ ದೂರವಿರುವುದರೊಂದಿಗೆ ಸಾಧನೆಗೆ ಮೂಲಭೂತವಾದ ಸದಾಚಾರವನ್ನು ಶ್ರದ್ಧೆಯಿಂದ ಅಳವಡಿಸಿಕೊಳ್ಳಲು ಶಕ್ಯವೆನ್ನಿಸುತ್ತದೆ.

*****



**ಮಧ್ವಶಾಸ್ತ್ರಮತ್ತು ಅನುಸಂಧಾನ – ೨೦**

# ಪಾಪಪುರುಷನ ದಹನಾದಿಗಳ ಅನುಸಂಧಾನ

– ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

ಸ್ಮೃತಿಗಳಲ್ಲಿ ಪ್ರಸ್ತುತವಾದ ಪಾಪಪುರುಷಶೋಷಣಾದಿಗಳ ವಿಷಯದಲ್ಲಿ ಶ್ರೀಮಧ್ವಗುರುಗಳು ನೀಡಿದ ಪರಿಷ್ಕಾರಗಳು :

೧. ಉದರದಲ್ಲಿರುವ ವಾಯುಮಂಡಲದಲ್ಲಿ ವಾಯುಬೀಜಾಕ್ಷರವಾದ 'ಯಂ' - ಎಂಬುದರಿಂದ ಪಾಪಪುರುಷನ ಶೋಷಣೆ ನಡೆಸುವಾಗ ವಾಯ್ವಂತರ್ಗತನಾದ ಪ್ರದ್ಯುಮ್ನನ ಧ್ಯಾನವನ್ನು ನಡೆಸಬೇಕು. (ಧ್ಯಾತ್ವಾ ತನ್ಮಂಡಲೇ ಹರಿಮ್ - ತಂ.ಸಾ.ಸಂ. ೨-೬)

'ಯಂ' - ಎನ್ನುವ ವಾಯುಬೀಜಾಕ್ಷರಮಂತ್ರ ಮುಖ್ಯವಾಗಿ ವಾಯ್ವಂತರ್ಗತ ಪ್ರದ್ಯುಮ್ನವಾಚಕವೆಂದೂ, ಬಳಿಕ ವಾಯುವಾಚಕವೆಂದೂ ಅನುಸಂಧಾನ ನಡೆಸಬೇಕು.

ಎಲ್ಲೆಡೆ ಸಂಚರಿಸುವವನು; ಎಲ್ಲವನ್ನೂ ಬಲ್ಲವನು 'ಯ' ('ಯಾತೀತಿ ಯಃ, ಯಾ ಪ್ರಾಪಣೇ, ಯೇ ಗತ್ಯರ್ಥಕಾಃ ತೇ ಜ್ಞಾನಾರ್ಥಕಾಃ') 'ಬಿಂದುರಪ್ಯವಧಾರಣೇ' ಎಂಬ ವೈದಿಕಸೂತ್ರದ ಪ್ರಕಾರ 'ಯಂ' - ಎಂಬಲ್ಲಿ ಇರುವ ಬಿಂದುವು ಸಂಚಾರದಲ್ಲಿ, ತಿಳುವಳಿಕೆಯಲ್ಲಿ ಅವಧಾರಣೆಯನ್ನು, ದಾರ್ಢ್ಯವನ್ನು - ಸಂಚರಿಸಿಯೇ ತೀರುವನು; ಎಲ್ಲವನ್ನೂ ತಿಳಿದಿರುವನು - ಈ ಗುಣಗಳು ಮುಖ್ಯವಾಗಿ ಪ್ರದ್ಯುಮ್ನನಲ್ಲಿ ಇರುವವು. 'ಆಭಾಸಕೋಽಸ್ಯ ಪವನಃ...' - ಎಂದಿರುವಂತೆ ಪ್ರದ್ಯುಮ್ನನ ಆ ಗುಣಗಳು ಅವನ ಪ್ರತಿಬಿಂಬನಾದ ವಾಯುವಿನಲ್ಲಿ ಪ್ರತಿಬಿಂಬಿತಗಳಾಗಿವೆ. ವಾಯು ತನ್ನ ನಿಯಂತ್ರಣದಲ್ಲಿರುವ ಉದರದ ವಾಯುವಿನಿಂದ ಪ್ರದ್ಯುಮ್ನನ ಆದೇಶಾನುಸಾರವಾಗಿ ಪಾಪಪುರುಷನನ್ನು ಒಣಗಿಸುವನು.

ಪ್ರದ್ಯುಮ್ನ ಹಾಗೂ ವಾಯುದೇವನ ಮಹಿಮೆಯಿಂದಾಗಿಯೇ ಆ ಪಾಪಪುರುಷ ಉದರದ ವಾಯುವಿನ ಶೋಷಣೆಗೆ ಒಳಗಾಗುವನು.

೨. ಹೃದಯದಲ್ಲಿರುವ ಅಗ್ನಿಮಂಡಲದಲ್ಲಿ ಬೀಜಾಕ್ಷರವಾದ 'ರಂ' - ಎಂಬು-ದರಿಂದ ಪಾಪಪುರುಷನ ದಹನ ನಡೆಸುವಾಗ ಅಗ್ನ್ಯಂತರ್ಗತ ಅನಿರುದ್ಧನ ಧ್ಯಾನ ನಡೆಸಬೇಕು(ಧ್ಯಾತ್ವಾ ತನ್ಮಂಡಲೇ ಹರಿಮ್ -ತಂ.ಸಾ.ಸಂ.).

'ರಂ' - ಎಂಬ ಅಗ್ನಿಬೀಜಾಕ್ಷರ ಮಂತ್ರ ಮುಖ್ಯವಾಗಿ ಅಗ್ನ್ಯಂತರ್ಗತ ಅನಿರುದ್ಧನ ವಾಚಕವೆಂದೂ, ಬಳಿಕ ಅಗ್ನಿವಾಚಕವೆಂದೂ ಅನುಸಂಧಾನ ನಡೆಸಬೇಕು.

ನಾಶ ಮಾಡುವವನು; ಸುಟ್ಟು ಹಾಕುವವನು ('ರೀಜ್ ಕ್ಷಯೇ') ಎಂಬ ಅರ್ಥ 'ರ' ಶಬ್ದದಿಂದ ಹೊರಟಿದೆ; 'ರಂ' - ಎಂಬಲ್ಲಿಯ ಬಿಂದುವಿಗೆ ಅವಧಾರಣ ಅರ್ಥ. ಆದುದರಿಂದ ಸುಟ್ಟು ಹಾಕಿಯೇ ತೀರುವವನೆಂಬ ಅರ್ಥವನ್ನು 'ರಂ' ಅಗ್ನಿಬೀಜಾಕ್ಷರ ಮಂತ್ರ ನೀಡುವುದು. ಆದುದುರಿಂದಲೇ ಪಾಪಪುರುಷನನ್ನು ಸುಟ್ಟುಹಾಕಲು ಪೂರ್ಣ ಸಾಮರ್ಥ್ಯವುಳ್ಳ ಅನಿರುದ್ಧ ಇದರಿಂದ ಮುಖ್ಯವಾಚ್ಯ. ಅವನ ಆದೇಶಕ್ಕೊಳಗಾಗಿ, ಅವನ ಪ್ರೇರಣೆಗೊಳಗಾಗಿ ಅಗ್ನಿಯೂ ಗೌಣವಾಗಿ ಪಾಪಪುರುಷನನ್ನು ಸುಟ್ಟುಹಾಕುವನು. ಹೀಗೆ ಅನಿರುದ್ಧ ಮತ್ತು ಅಗ್ನಿಯ ಮಹಿಮೆಯಿಂದಾಗಿ ಪಾಪಪುರುಷನ ದಹನ ನಡೆಯುವುದೆಂಬ ಅನುಸಂಧಾನದೊಂದಿಗೆ 'ರಂ' - ಎಂಬ ಬೀಜಾಕ್ಷರಮಂತ್ರವನ್ನು ಜಪಿಸಬೇಕು.

೩. ಶಿರಸ್ಸಿನ ವಾರುಣಮಂಡಲದಲ್ಲಿ 'ವಂ' - ಎಂಬ ಬೀಜಾಕ್ಷರಮಂತ್ರದಿಂದ ದೇಹವನ್ನು ಅಮೃತವೃಷ್ಟಿಯಿಂದ ಒದ್ದೆಗೊಳಿಸುವಾಗ 'ವಂ' ಬೀಜಾಕ್ಷರಮಂತ್ರ ಪ್ರತಿಪಾದ್ಯನಾಗಿ ವಾಸುದೇವನನ್ನು ಧ್ಯಾನಿಸಬೇಕು. ಗೌಣವಾಗಿಯಷ್ಟೇ ವರುಣ ಪ್ರತಿಪಾದ್ಯನಾಗಿರುವನು.

'ಗತಿ' ಹಾಗೂ 'ಗಂಧನ' ಎಂಬ ಎರಡು ಅರ್ಥಗಳಲ್ಲಿರುವ 'ವಾ' ಧಾತುವಿನಿಂದ ನಿಷ್ಪನ್ನವಾದ 'ವಂ' - ಎಂಬ ಮಂತ್ರ ಅಮೃತದಿಂದ ಸುವಾಸನೆ-ಗೊಳಿಸುವಿಕೆಯನ್ನೂ, ಜ್ಞಾನದಿಂದ ಪವಿತ್ರಗೊಳಿಸುವಿಕೆಯನ್ನೂ ('ಯೇ ಗತ್ಯರ್ಥಕಾಃ ತೇ ಜ್ಞಾನಾರ್ಥಕಾಃ') ತಿಳಿಸಬಲ್ಲದು. ಅಲ್ಲದೆ 'ವಂ' - ಎಂಬುದು ವಾಸುದೇವನಾಮದ ಸಂಕ್ಷಿಪ್ತರೂಪವೂ (ಅಬ್ರಿವಿಯೇಷನ್) ಆಗಬಲ್ಲದು. 'ವಂ' - ಎಂಬಲ್ಲಿಯ ಬಿಂದು ಆಯಾ ಅರ್ಥದ ಅವಧಾರಣೆಯನ್ನು ಸೂಚಿಸುವುದು.

ಈ ಅನುಸಂಧಾನದೊಂದಿಗೆ 'ವಂ' - ಎಂಬ ಬೀಜಮಂತ್ರವನ್ನು ಜಪಿಸಬೇಕು.

**ಅಂತರ್ಯಾಮಿತಯಾ ಧ್ಯೇಯಃ**

'ಯಂ' - ಎಂಬ ವಾಯುಬೀಜಾಕ್ಷರ, 'ರಂ'- ಎಂಬ ಅಗ್ನಿಬೀಜಾಕ್ಷರ ಹಾಗೂ 'ವಂ' - ಎಂಬ ವಾರುಣಬೀಜಾಕ್ಷರ ಮಂತ್ರಗಳಾಗಿರುವುದರಿಂದ ಆದಿಯಲ್ಲಿ



ಹಾಗೂ ಅಂತ್ಯದಲ್ಲಿ ಓಂಕಾರವನ್ನು ಪ್ರಯೋಗಿಸಬೇಕು. ಆ ಓಂಕಾರದಿಂದ ವಾಯು, ಅಗ್ನಿ, ವರುಣ - ಇವರ ಅಂತರ್ಯಾಮಿಯಾದ ಭಗವಂತ ಎಂಬ ಅನುಸಂಧಾನ ತಾಳಬೇಕೆಂದು ಶ್ರೀಮಧ್ವಗುರುಗಳು ತಂತ್ರಸಾರಸಂಗ್ರಹದಲ್ಲಿ (೪-೭೫) ತಿಳಿಸಿರುವರು -

**ಮಂತ್ರೇಷ್ವೇತೇಷು ಸರ್ವೇಷು ವಾಚ್ಯಸ್ತಾರೇಣ ಕೇಶವಃ ।**
**ಅಂತರ್ಯಾಮಿತಯಾ ಧ್ಯೇಯಃ ಸರ್ವದೇವೇಷು ಸರ್ವದಾ ॥**

**ಪ್ರವೇಶ ಹಾಗೂ ಸಾಮರ್ಥ್ಯದಾನ :**

ಆದುದರಿಂದ 'ಓಂ ಯಂ ಓಮ್' - ಎಂಬ ಬೀಜಾಕ್ಷರದಿಂದ ವಾಯುದೇವನನ್ನೂ ಅವನ ಅಂತರ್ಯಾಮಿ ಭಗವಂತನನ್ನೂ, 'ಓಂ ರಮ್ ಓಮ್' ಎಂಬ ಬೀಜಾಕ್ಷರದಿಂದ ಅಗ್ನಿಯನ್ನೂ ಅವನ ಅಂತರ್ಯಾಮಿ ಅಗ್ನಿನಾರಾಯಣನನ್ನೂ, 'ಓಂ ವಂ ಓಮ್' - ಎಂಬ ಬೀಜಾಕ್ಷರದಿಂದ ವರುಣನನ್ನೂ, ಅವನ ಅಂತರ್ಯಾಮಿ ಭಗವಂತನನ್ನೂ ಧ್ಯಾನಿಸಬೇಕು. ಆದಿಯ ಹಾಗೂ ಅಂತ್ಯದ ಓಂಕಾರದಿಂದ ಗುಣಪೂರ್ಣನಾದವನು; ಜಗದಾಧಾರವಾದವನು - ಎಂದು ಸಾಮಾನ್ಯ ಅರ್ಥದ ಚಿಂತನೆಗಿಂತ ಹೀಗೆ ಅರ್ಥವಿಶೇಷದ ಅನುಸಂಧಾನ ನಡೆಸಬಹುದು. ಯಂ, ರಂ ಹಾಗೂ ವಂ - ಇವುಗಳ ಮೊದಲ ಓಂಕಾರ ವಾಯುವೇ ಮುಂತಾದ ದೇವತೆಗಳಲ್ಲಿ ಅಂತರ್ಯಾಮಿಯಾಗಿ ಭಗವಂತನ ಪ್ರವೇಶವನ್ನು ತಿಳಿಸುತ್ತಿದೆ. (ಅವತಿ ತತ್ತದ್ದೇವಾ ನೌ ಅಂತರ್ಯಾ ಮಿತಯಾ ಪ್ರವಿಶತೀತಿ ಓಮ್, 'ಅವ ಪ್ರವೇಶೇ') ಬೀಜಾಕ್ಷರಗಳ ಕೊನೆಯಲ್ಲಿ ಪಠಿಸಲಾಗುವ ಓಂಕಾರ ವಾಯುವೇ ಮುಂತಾದ ದೇವತೆಗಳನ್ನು ಪಾಪಪುರುಷನ ಶೋಷಣವೇ ಮುಂತಾದ ಕಾರ್ಯದಲ್ಲಿ ಸಮರ್ಥರಾಗುವಂತೆ ಮಾಡುವವನು, (ಅವತಿ ಪಾಪಪುರುಷಸ್ಯ ಶೋಷಣಾದಿಕಾರ್ಯೇಷು ಸಮರ್ಥಾನ್ ಕರೋತೀತಿ ಓಮ್, 'ಅವ ಸಾಮರ್ಥ್ಯೇ') ಹೀಗೆ ಸಾಮರ್ಥ್ಯಕೊಟ್ಟು ಅವರಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಸಂರಕ್ಷಿಸುವವನು (ಅವತಿ ಅಂತರ್ಯಾಮೀ ಸನ್ ರಕ್ಷತೀತಿ ಓಮ್, ' ಅವ ರಕ್ಷಣೇ') - ಎಂಬ ಅರ್ಥವಿಶೇಷಗಳನ್ನು ಹೊರಡಿಸುವುದೆಂಬ ಅನುಸಂಧಾನ ತಾಳಬಹುದಾಗಿದೆ.

(ಮುಂದಿನ ಸಂಚಿಕೆಯಲ್ಲಿ: ಲೋಕನ್ಯಾಸದ ಅನುಸಂಧಾನ)

*****

# ಶ್ರೀವಿಜಯದಾಸರ ಸುಳಾದಿಯಲ್ಲಿ ನಾರಾಯಣಕವಚ

– ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀಪುರಂದರದಾಸರ ಉತ್ತರಕಾಲದ ಪ್ರಮುಖ ಹರಿದಾಸರೆಂದರೆ ಶ್ರೀವಿಜಯದಾಸರು. ತಮ್ಮ ಜೀವನದ ಮೊದಲ ಮೂವತ್ಮೂರುವರ್ಷಗಳವರೆಗೆ ಧನ ಹಾಗೂ ಜ್ಞಾನಗಳಿಂದ ವಂಚಿತರಾಗಿದ್ದ ಇವರು ಅನಂತರ ಮಾಡಿದ ಸಾಧನೆ ನಿಜವಾದ ಅರ್ಥದಲ್ಲಿ ಅದ್ಭುತವಾದದ್ದು. ದೈವಿಕವಾಗಿ ಶ್ರೀವಿಜಯವಿಟ್ಠಲ ಎಂಬ ಅಂಕಿತವನ್ನು ಪಡೆದ ಹಿರಿಮೆ ಇವರದು. ಸಂಖ್ಯೆಯ ದೃಷ್ಟಿಯಿಂದ ಶ್ರೀಪುರಂದರದಾಸರ ಕೃತಿಗಳು ಅಪಾರವೆನಿಸಿದರೂ ಇಂದು ದೊರೆತಿರುವ ಕೃತಿಗಳಲ್ಲಿ ಅತಿ ಹೆಚ್ಚಿನ ಕೃತಿಗಳು ಶ್ರೀವಿಜಯದಾಸರದೇ ಎಂಬುದು ವಿಶೇಷ. ಈ ದೃಷ್ಟಿಯಲ್ಲಿ ಶ್ರೀವಿಜಯದಾಸರದು ಹರಿದಾಸಸಾಹಿತ್ಯದಲ್ಲಿ ಸಿಂಹಪಾಲು ಎನ್ನಬಹುದು.

ಶ್ರೀವಿಜಯದಾಸರ ಕೃತಿಗಳಲ್ಲೂ ಹೆಚ್ಚಿನವು ಸುಳಾದಿಗಳೆಂಬುದು ಮತ್ತೊಂದು ವಿಶೇಷಾಂಶ. ಅತ್ಯಂತ ಕಠಿಣವಾದ ಮಾಧ್ಯಮವೆನ್ನಿಸಿರುವ ಸುಳಾದಿಗಳು ಶ್ರೀವಿಜಯದಾಸರಿಗೆ ಅತಿಸುಲಭದ ರಚನೆಗಳೆನಿಸಿದ್ದು ಅವರ ಸಿದ್ಧಿಯ ಫಲ. ಸಂಖ್ಯೆಯಂತೆ ವಿಷಯವೈವಿಧ್ಯದಲ್ಲೂ ಅವರ ಸುಳಾದಿಗಳು ಬೆರಗು ಹುಟ್ಟಿಸುತ್ತವೆ. ಪ್ರತಿಯೊಂದು ಸುಳಾದಿಯ ವಿಷಯಶ್ರೀಮಂತಿಕೆ, ನಿರೂಪಣಾಕೌಶಲ ಅಚ್ಚರಿ ಹುಟ್ಟಿಸುವಂತಹುದು. ಚಿಂತನೆಯ ಸಮಗ್ರತೆ ಅವರ ಸುಳಾದಿಗಳ ಮತ್ತೊಂದು ವೈಶಿಷ್ಟ್ಯ. ಕೆಲವು ಸುಳಾದಿಗಳ ಮೂಲ ಆಕರ ಇನ್ನೂ ವಿದ್ವತ್ಪ್ರಪಂಚಕ್ಕೆ ಗೋಚರಿಸಿಲ್ಲ ಎಂದರೆ ಶ್ರೀವಿಜಯದಾಸರ ವಿಷಯಸಂಗ್ರಹದ ವ್ಯಾಪ್ತಿ ಅರಿವಾಗುತ್ತದೆ. ಇದರಿಂದಾಗಿ ''**ಸುಳಾದಿದಾಸ**''ರೆಂದೇ ಅವರು ಸುಪ್ರಸಿದ್ಧರು.

ಶ್ರೀಪುರಂದರದಾಸರು ಹರಿದಾಸಕೂಟದ ಪ್ರಥಮಾಧ್ಯಕ್ಷರೆನ್ನಿಸಿದರೂ ಅವರಿಂದ ದಾಸದೀಕ್ಷೆ ಪಡೆದು ಕೃತಿಕಾರರೆನ್ನಿಸುವವರ ಬಗ್ಗೆ ದಾಖಲೆಗಳು ಲಭಿಸುವುದಿಲ್ಲ. ಶ್ರೀವಿಜಯದಾಸರ ಬಗ್ಗೆ ಹಾಗಲ್ಲ. ಶ್ರೀಗೋಪಾಲದಾಸರು, ಶ್ರೀಮೋಹನದಾಸರು, ಶ್ರೀವೇಣುಗೋಪಾಲದಾಸರು, ಶ್ರೀಗುರುಗೋಪಾಲ-ದಾಸರು ಮೊದಲಾದ ಅನೇಕರಿಗೆ ದಾಸದೀಕ್ಷೆಯನ್ನು ನೀಡಿ ಹರಿದಾಸರನ್ನಾಗಿಸಿದ



ಕೀರ್ತಿ ಇವರದು. ಹರಿಕಥಾಮೃತಸಾರದಂತಹ ಕೃತಿರತ್ನವನ್ನು ನೀಡಿದ ಶ್ರೀಜಗನ್ನಾಥದಾಸರ ಸಾಧನೆಯಲ್ಲೂ ಗಮನಾರ್ಹ ಪಾತ್ರ ಇವರದಾಗಿದೆ. ಇವರಿಂದ ಅಂಕಿತ ಪಡೆದವರು ಸಹ ಅನೇಕರಿಗೆ ದಾಸದೀಕ್ಷೆ ನೀಡಿ ಹರಿದಾಸರೆನ್ನಿಸಿದರು. ಹೀಗೆ ಹರಿದಾಸಪರಂಪರೆಯನ್ನು ಬೆಳೆಸಿದ ವಿಶೇಷಸಾಧನೆ ಶ್ರೀವಿಜಯದಾಸರದು. ಇಂದಿನ ಸಕಲ ಹರಿದಾಸಪಂಥದ ಒಟ್ಟು ಮೂಲವನ್ನು ಹುಡುಕಿದಾಗ ಅದು ಶ್ರೀವಿಜಯದಾಸರಲ್ಲೇ ಪರ್ಯವಸಾನವಾಗುತ್ತದೆ ಎಂಬುದು ಇವರ ಅಸಾಧಾರಣ ಪ್ರಶಸ್ತಿ.

**ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ** ಎಂಬ ಇವರ ಮೇಲೆ ರಚಿತವಾಗಿರುವ ಶ್ರೀವ್ಯಾಸವಿಟ್ಠಲರ ಕೃತಿ ಹರಿದಾಸಪರಂಪರೆಯಲ್ಲೇ ಒಬ್ಬ ಗುರುಗಳ ಮೇಲೆ ರಚಿತವಾಗಿರುವ ಕೋಟಿಗಟ್ಟಲೆ ಸಂಖ್ಯೆಯಲ್ಲಿ ಪಾರಾಯಣಕಂಡಿರುವ ವಿಶಿಷ್ಟ ಕೃತಿ.

**(ಇನ್ನು ಮುಂದೆ ಪ್ರತಿ ಸಂಚಿಕೆಯಲ್ಲೂ ಶ್ರೀವಿಜಯದಾಸರ ಸುಳಾದಿ-ಗಳಿಂದಾಯ್ದ ಪ್ರಮೇಯಭಾಗಗಳನ್ನು ಕ್ರಮವಾಗಿ ನೀಡಲಾಗುವುದು. ಈ ಬಾರಿ ಅವರ ನಾರಾಯಣಕವಚದ ಸಂಗ್ರಹವನ್ನು ಕೊಡಲಾಗಿದೆ.)**

ನಾರಾಯಣಕವಚವು ಶ್ರೀಮದ್ಭಾಗವತದಲ್ಲಿ ನಿರೂಪಿತವಾಗಿರುವ ಅಪೂರ್ವ-ಮಾಂತ್ರಿಕ ರಕ್ಷಾಕವಚ. ಅದರ ಕನ್ನಡ ಅನುವಾದಗಳನ್ನು ಶ್ರೀವ್ಯಾಸರಾಜರು ಹಾಗೂ ಶ್ರೀವಾದಿರಾಜರು ರಚಿಸಿರುವರು (ನೋಡಿ: ನಮ್ಮ ಪ್ರಕಾಶನದ '**ಹರಿಭಜನಕಲ್ಪದ್ರುಮ**' - ಪು. ೨೬೩, ೨೫೪). ಪ್ರಸ್ತುತ ಶ್ರೀವಿಜಯದಾಸರ ಸುಳಾದಿಯೊಂದರಲ್ಲಿನ 'ನಾರಾಯಣಕವಚ'ದ ಭಾವ ಇಲ್ಲಿದೆ:

ಮಟ್ಟತಾಳ

**ಸ್ಥಳದಲ್ಲಿ ವಾಮನ ಅಟವ್ಯದಿ ನರಸಿಂಹ**
**ಜಲದಲ್ಲಿ ಮತ್ಸ್ಯ ಗಗನದಿ ತ್ರಿವಿಕ್ರಮಾ**
**ಕುಲಗಿರಿಯಲ್ಲಿ ಪರಶುರಾಮನು ಮಾರ್ಗ-**
**ದಲಿ ಭೂವರಾಹಾತ್ಮಾ ಬಲು ಪ್ರವಾಸದಲಿ**
**ಸಲಕ್ಷ್ಮಣಭರತಾಗ್ರಜ ಜಾನಕಿಪತಿ ರಾಮಾ**
**ತಿಳಿವದು ಈ ವಿಧದಿ ರಕ್ಷಕ ಮೂರ್ತಿಗಳ**
**ಬಲಿಮರ್ದನಪಾದ ವಿಜಯವಿಟ್ಠಲರೇಯ**
**ಒಲಿದು ಸಂಗಡಲಿದ್ದು ಸುಖವೇ ಕೊಡುತಿಪ್ಪಾ॥ ೨ ॥**

ತ್ರಿವಿಡಿತಾಳ

ಮತ್ತೆ ನಿಖಿಳಪ್ರಮಾದರಕ್ಷಕ ಶುಭ-
ಮೂರ್ತಿ ನಾರಯಣಾತ್ಮಕನೊ ಉ-
ನ್ಮತ್ತ ಉನ್ಮಾದಹ್ರಾಸಕನೆ ನರ ನಾಮಕಸ್ವಾಮಿ
ದತ್ತನೂ  ಆ ಯೋಗದರಕ್ಷಕನಾಗಿಪ್ಪಾ
ವೊತ್ತ ಕರ್ಮಾಕರ್ಮಬಂಧಮೋಚಕ ಕಪಿಲಾತ್ಮಕ ಸ-
ನತ್ಕುಮಾರನು ಯೋಗ್ಯತಾವ ಕಾಮಕೆ ಇನ್ನು
ಭೃತ್ಯಧರ್ಮವೇ ಮರೆದು ಪತಿದೇವ ಹೇಳನ
ಕೃತ್ತಿಗೆ ಹಯಗ್ರೀವ ಪಾಲಿಸುತಿಪ್ಪನು
ತತ್ವೇಶರ ಕೂಡ ಅರ್ಚನೆ ಮಾಡದೆ ಹರಿಗೆ
ತುತ್ತು ಈಯದೆ ಲಕ್ಷಣ ಕರ್ಮಸ್ಮರಣ ರ-
ಹಿತ್ತವಾಗಿದ್ದ ಪೂಜೆಯ ದೋಷಹ ಮಹಿದಾ-
ಸಾತ್ಮಕ ಹರಿಯೆನ್ನು ಅಶೇಷ ನಿರಯವಾ
ಉತ್ತರಿಸುವಾ ಕೂರ್ಮ ಧನ್ವಂತರಿದೇವಾ-
ಪತ್ಯ ರಕ್ಷಕಾ ದ್ವಂದ್ವಭಯಪರಿಹಾರಕ
ಕೀರ್ತಿಪುರುಷ ಋಷಭ ಯಜ್ಞ ಕೃತಫಲದಲ್ಲಿ
ನಿತ್ಯ ಯಜ್ಞಾತ್ಮಕ ಸುರನಾಯಕಾ
ವೃತ್ತಿ ಕ್ರೋಧಾವೇಶ ಕಳೆದ ಬಲಭದ್ರಾತ್ಮಕಾ
ಸತ್ಯಸಂಕಲ್ಪನೋ ಪರಮಾತ್ಮನೋ
ಸತ್ಯವತೀಸೂನು ಸಂಪ್ರಮೋಹ ಬಿಡಿಪಾ
ಮಿಥ್ಯಾಜ್ಞಾನಿಗಳ ಸಂಗವ ಹರಿಸುವ ಬುದ್ಧಿ
ಚಿತ್ತಾದಿಯಲಿ ಕಲಿಯ ಕಲ್ಮಷವಿರೆ ನು-
ಗ್ಗೊತ್ತುವಾ ಕಲ್ಕಿರೂಪವೆನಿಸಿ
ಸತ್ಯಪರಾಯಣಸ್ವಾಮಿ ವಿಜಯವಿಟ್ಠಲ ಸ-
ರ್ವತ್ರದಲ್ಲಿ ಇದ್ದು ಅಘನಾಶ ಮಾಡುವಾ ॥ ೩ ॥

ಜತೆ

ಭಗವನ್ಮೂರ್ತಿಗಳನ್ನು ಚಿಂತಿಸು ಅಲ್ಲಲ್ಲಿ
ಅಘನಿರ್ಲೇಪನಾಗು ವಿಜಯವಿಟ್ಠಲ ಪೊಳಿವಾ ॥

* * * * *



## ರಥಸಪ್ತಮೀಸ್ನಾನಮಂತ್ರ (೨೨.೦೧.೧೦)

ಯದ್ಯಜ್ಜನ್ಮಕೃತಂ ಪಾಪಂ ಮಯಾ ಸಪ್ತಸು ಜನ್ಮಸು ।
ತನ್ಮೇ ರೋಗಂ ಚ ಶೋಕಂ ಚ ಮಾಕರೀ ಹಂತು ಸಪ್ತಮೀ ।
ಸಪ್ತಸಪ್ತಿಪ್ರಿಯೇ ದೇವಿ  ಸಪ್ತಲೋಕಸುಪೂಜಿತೇ ।
ಸಪ್ತಜನ್ಮಾರ್ಜಿತಂ ಪಾಪಂ ಹರ ಸಪ್ತಮಿ ಸತ್ವರಮ್ ॥
ನೌಮಿ ಸಪ್ತಮಿ ದೇವಿ ತ್ವಾಂ ಸಪ್ತಲೋಕೈಕಮಾತರಮ್ ।
ಸಪ್ತಾರ್ಕಪತ್ರಸ್ನಾನೇನ ಮಮ ಪಾಪಂ ವ್ಯಪೋಹಯ ॥
ಏತಜ್ಜನ್ಮಕೃತಂ ಪಾಪಂ ಯಚ್ಚ ಜನ್ಮಾಂತರಾರ್ಜಿತಮ್ ।
ಮನೋವಾಕ್ಕಾಯಜಂ ಯಚ್ಚ ಜ್ಞಾತಾಜ್ಞಾತೇ ಚ ಯೇ ಪುನಃ ॥

## ಯಮತರ್ಪಣಮಂತ್ರ (ರಥಸಪ್ತಮೀ - ೨೨.೦೧.೧೦)

ಯಮಾಯ ಧರ್ಮರಾಜಾಯ ಮೃತ್ಯವೇ ಚಾಂತಕಾಯ ಚ ।
ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಚ ॥
ಔದುಂಬರಾಯ ದಧ್ನಾಯ ನೀಲಾಯ ಪರಮೇಷ್ಠಿನೇ ।
ವೃಕೋದರಾಯ ಚಿತ್ರಾಯ ಚಿತ್ರಗುಪ್ತಾತ್ಮನೇ ನಮಃ ॥

## ಭೀಷ್ಮತರ್ಪಣಮಂತ್ರ (ಭೀಷ್ಮಾಷ್ಟಮೀ - ೨೩.೦೧.೧೦)

ಭೀಷ್ಮಃ ಶಾಂತನವೋ ಧೀರಃ ಸತ್ಯವಾದೀ ಜಿತೇಂದ್ರಿಯಃ ।
ಆಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್ ॥
ವೈಯಾಘ್ರಪಾದಗೋತ್ರಾಯ ಸಾಂಕೃತ್ಯಪ್ರವರಾಯ ಚ ।
ಅಪುತ್ರಾಯ ದದಾಮ್ಯೇತಜ್ಜಲಂ ಭೀಷ್ಮಾಯ ವರ್ಮಣೇ ॥
ವಸೂನಾಮವತಾರಾಯ ಶಂತನೋರಾತ್ಮಜಾಯ ಚ ।
ಅರ್ಘ್ಯಂ ದದಾಮಿ ಭೀಷ್ಮಾಯ ಆಬಾಲಬ್ರಹ್ಮಚಾರಿಣೇ ॥

ವಿ.ಸೂ.: ಯಮತರ್ಪಣ ಭೀಷ್ಮತರ್ಪಣಗಳನ್ನು ಜೀವತ್ಪಿತೃಕರು ಸಹ ಕೊಡಲೇಬೇಕು.

## ಮಾಘಸ್ನಾನಮಂತ್ರ (೩೧.೧೨.೦೯ ರಿಂದ ೩೦.೦೧.೧೦ರ ವರೆಗೆ)

ದುಃಖದಾರಿದ್ರ್ಯನಾಶಾಯ ಶ್ರೀವಿಷ್ಣೋಸ್ತೋಷಣಾಯ ಚ ।
ಪ್ರಾತಃಸ್ನಾನಂ ಕರೋಮ್ಯದ್ಯ ಮಾಘೇ ಪಾಪವಿನಾಶನಮ್ ॥
ಮಕರಸ್ಥೇ ರವೌ ಮಾಘೇ ಗೋವಿಂದಾಚ್ಯುತ ಮಾಧವ ।
ಸ್ನಾನೇನಾನೇನ ಮೇ ದೇವ ಯಥೋಕ್ತಫಲದೋ ಭವ ॥
ಕೃಷ್ಣಾಚ್ಯುತ ನಿಮಜ್ಜಾಮಿ ಪ್ರಭಾತೇಽಸ್ಮಿನ್ ಶುಭೋದಕೇ ।
ಅನೇನ ಮಾಘಸ್ನಾನೇನ ಸುಪ್ರೀತೋ ಮಾಂ ಸಮುದ್ಧರ ॥
ಮಾಘಸ್ನಾನಂ ಕರಿಷ್ಯಾಮಿ ಮಕರಸ್ಥೇ ದಿವಾಕರೇ ।
ಆಸಮಾಪ್ತಿ  ಮಹಾದೇವ ನಿರ್ವಿಘ್ನಂ ಕುರು ಮಾಧವ ॥

# ಶ್ರೀರಘೂತ್ತಮತೀರ್ಥರ ಹಿರಿಮೆ

## (೨೮.೧೨.೦೯ - ಶ್ರೀರಘೂತ್ತಮತೀರ್ಥರ ಆರಾಧನಾನಿಮಿತ್ತ ಲೇಖನ)

– ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀರಘೂತ್ತಮತೀರ್ಥ(ಕ್ರಿ.ಶ.೧೫೫೬-೧೫೯೬)ರು ವೈಷ್ಣವವೇದಾಂತದ ರಸಋಷಿಗಳಲ್ಲೊಬ್ಬರು. ಶಾಸ್ತ್ರವೈದುಷ್ಯ, ಪಾಠಪ್ರವಚನ ಹಾಗೂ ತಪಃಸಿದ್ಧಿಗಳ ತ್ರಿವೇಣೀಸಂಗಮವೆಂಬುದು ಇವರ ವ್ಯಕ್ತಿತ್ವದ ವಿಶೇಷ. ಶ್ರೀರಘುವರ್ಯ-ತೀರ್ಥರಂತಹ ಮಹನೀಯರ ಶಿಷ್ಯರಾಗಿ, ಶ್ರೀವೇದವ್ಯಾಸತೀರ್ಥರಂತಹ ಮಹಾತಪಸ್ವಿಗಳ ಗುರುಗಳಾಗಿ ಇವರು ಗಳಿಸಿರುವ ಮಾನ್ಯತೆ ಅಪೂರ್ವ-ವಾದುದು. ಮಧ್ವಸಿದ್ಧಾಂತದ ಗ್ರಂಥಕಾರರಾಗಿ ಇವರ ಸ್ಥಾನ ಅಗ್ರಶ್ರೇಣಿಯದು. ಟಿಪ್ಪಣೀಕಾರರ ಪರಂಪರೆಯನ್ನೇ ನಿರ್ಮಿಸಿದ ವಿದ್ವಚ್ಛಿರೋಮಣಿಗಳು ಎಂಬುದು ಇವರ ಪ್ರಶಸ್ತಿ. ಉತ್ತರಾದಿಮಠದ ಗುರುಪರಂಪರೆಯಲ್ಲಂತೂ ಇವರ ಸ್ಥಾನ ಅನುಪಮವಾದುದು. ಮುನಿತ್ರಯರೆನ್ನಿಸಿದ ಶ್ರೀಮಧ್ವಾಚಾರ್ಯರು (ಕ್ರಿ.ಶ.೧೨೦೦-೧೨೮೦), ಶ್ರೀಜಯತೀರ್ಥರು ಮತ್ತು ಶ್ರೀವ್ಯಾಸರಾಜರು, ಹಾಗೂ ಶ್ರೀಶ್ರೀಪಾದರಾಜರು ಹಾಗೂ ಶ್ರೀವಾದಿರಾಜರ ಅನಂತರದ ಒಬ್ಬ ಮಹಾವಿಭೂತಿಗಳು ಎಂಬುದು ಇವರ ಹಿರಿಮೆ. ಸೋದೆಯ ಶ್ರೀವಾದಿರಾಜಸ್ವಾಮಿಗಳಂತೆ, ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳಂತೆ, ತಿರುಕ್ಕೋಯಿಲೂರಿನ ಶ್ರೀರಘೂತ್ತಮ ಸ್ವಾಮಿಗಳು ಕಲಿಯುಗದ ಕಲ್ಪವೃಕ್ಷ, ಕಾಮಧೇನುವೆಂದು ಖ್ಯಾತರಾಗಿರುವರು. ಈ ಮೂವರಲ್ಲಿ ಮೊದಲು ವೃಂದಾವನಪ್ರವೇಶ ಮಾಡಿದವರು ಇವರೇ.

ದ್ವೈತವೇದಾಂತದ ಮಹಾತಪಸ್ವಿಗಳ ಸಾಲಿನಲ್ಲಿ ಶ್ರೀರಘೂತ್ತಮರು ಕಂಗೊಳಿಸುವರು. ದೈವಿಕವಾಗಿ ಲಭಿಸಿದ ಅಪಾರವೈದುಷ್ಯದಿಂದಾಗಿ ಅವರು ಸಾಧಿಸಿದ ವಿಕ್ರಮ ಅಪೂರ್ವವಾದುದು. ಪಾಠಪ್ರವಚನಪ್ರಾಕಾರದಲ್ಲಿ ಅವರಿಂದ ವಿಶಿಷ್ಟಕ್ರಾಂತಿಯೇ ನಡೆಯಿತು. ಶ್ರೀವೇದವ್ಯಾಸತೀರ್ಥರು, ಶ್ರೀವೇದೇಶ-ತೀರ್ಥರು, ವ್ಯಾಸನಾರಾಯಣಾಚಾರ್ಯರು, ತರಂಗಿಣೀರಾಮಾಚಾರ್ಯರು, ಪಾಂಡುರಂಗಿ ಆನಂದಭಟ್ಟಾರಕರು, ರೊಟ್ಟಿ ವೇಂಕಟಾದ್ರಿಭಟ್ಟರು ಮೊದಲಾದ ದಿಗ್ದಂತಿಪಂಡಿತರು ಅವರ ಗರಡಿಯಲ್ಲಿ ಸಿದ್ಧರಾದ ಮಹಾನುಭಾವರು. ಅವರೆಲ್ಲರ ಶಿಷ್ಯವೃಂದದ ಪರಂಪರೆಯೂ ಸುದೀರ್ಘಕಾಲ ಉಳಿದುಬಂದದ್ದು ಮತ್ತೊಂದು ವಿಶೇಷ.



ಗ್ರಂಥರಚನೆಯಲ್ಲಂತೂ ಶ್ರೀರಘೂತ್ತಮತೀರ್ಥರದು ಮತ್ತೊಂದು ವಿಕ್ರಮ. ಟಿಪ್ಪಣೀಯುಗವನ್ನು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲಬೇಕು. ಶ್ರೀವ್ಯಾಸರಾಜರ ತಾತ್ಪರ್ಯಚಂದ್ರಿಕಾ, ಮಂದಾರಮಂಜರೀಗ್ರಂಥಗಳು ಟಿಪ್ಪಣೀಗ್ರಂಥಗಳಾದರೂ, ಅವು ಮೂಲತಃ ವಾದಗ್ರಂಥಗಳಾಗಿ ಮಾನ್ಯತೆ ಪಡೆದವು. ಅದರಂತೆ ಮತ್ತೊಬ್ಬ ಮಹಾಗ್ರಂಥಕಾರರಾದ ಶ್ರೀವಾದಿರಾಜರೂ ಸಹ ಯುಕ್ತಿಮಲ್ಲಿಕೆಯಂತಹ ಮೇರುಕೃತಿಯಿಂದಾಗಿ ವಾದಗ್ರಂಥಕಾರರ ಸಾಲಿನಲ್ಲೇ ಸೇರಿದರು. ಶ್ರೀವಿಜಯೀಂದ್ರತೀರ್ಥರು ಟಿಪ್ಪಣೀಕೃತಿಗಳನ್ನು ರಚಿಸಿರುವರಾದರೂ, ಅವರ ಉಪಸಂಹಾರವಿಜಯ, ಭೇದವಿದ್ಯಾವಿಲಾಸ ಮೊದಲಾದ ಕೃತಿಗಳಿಂದಾಗಿ ಮೂಲತಃ ಅನುಪಮಖಂಡನ ಗ್ರಂಥಕಾರರೆನ್ನಿಸಿದರು. ಮುಖ್ಯವಾಗಿ ಟಿಪ್ಪಣೀಗ್ರಂಥಗಳನ್ನೇ ರಚಿಸಿ, ಗ್ರಂಥರಚನೆಯ ಪರಂಪರೆಗೇ ಹೊಸ ಆಯಾಮ ನೀಡಿದ ಹಿರಿಮೆ ಶ್ರೀರಘೂತ್ತಮತೀರ್ಥರದು.

ಭಾವಬೋಧಗಳೆಂದೇ ಖ್ಯಾತವಾದ ಅವರ ಟಿಪ್ಪಣೀಗ್ರಂಥಗಳು ಟೀಕಾಗ್ರಂಥಗಳ ಹಿನ್ನೆಲೆಯಲ್ಲಿ ಮೂಲಗ್ರಂಥಗಳ ಆಶಯವನ್ನು ಗ್ರಹಿಸಲು ನೀಡುವ ನೆರವು ಅದ್ವಿತೀಯವಾದುದು. ಅವರ ಪಂಚಭಾವಬೋಧಕೃತಿಗಳು ಮಧ್ವಸಿದ್ಧಾಂತ ಮುಕ್ಕಣ್ಣನ ಪಂಚಮುಖಗಳಂತೆ ಶೋಭಿಸುತ್ತಿವೆ ಎಂದು ಅವರ ಸ್ತೋತ್ರದಲ್ಲಿ ನಿರೂಪಿತವಾಗಿದೆ :

> ಪಂಚಕೈರ್ಭಾವಬೋಧಾಖ್ಯೈರ್ಗ್ರಂಥೈಃ ಪಂಚಲಸನ್ಮುಖೈಃ ।
> ತತ್ತ್ವವಿಜ್ಞಾಪಕೈಃ ಸ್ವಾನಾಮುಪಮೇಯಂ ಪಿನಾಕಿನಾ ॥

ಸೂತ್ರ, ಗೀತಾ ಮತ್ತು ಉಪನಿಷತ್ತುಗಳೆಂಬ ಪ್ರಸ್ಥಾನತ್ರಯಕ್ಕೂ ಅವರ ಟಿಪ್ಪಣಿಗಳು ಉಪಲಬ್ಧವಿರುವುದು ತುಂಬಾ ಗಮನಾರ್ಹ. ಅವರ ವಿಷ್ಣುತತ್ತ್ವ-ನಿರ್ಣಯಭಾವಬೋಧ ಪ್ರಕರಣಗ್ರಂಥಗಳ ಟಿಪ್ಪಣೀರಚನೆಯ ಪರಂಪರೆಗೇ ನಾಂದಿ ಹಾಡಿತು.

ಅವರ ಮೇಲ್ಪಂಕ್ತಿಯಲ್ಲಿ ಸಾಗಿದ ಅವರ ಪ್ರಮುಖಶಿಷ್ಯರೆಲ್ಲರೂ, ಪಾಠಪ್ರವಚನಗಳಲ್ಲಿ ಹೇಗೋ, ಹಾಗೆ ಗ್ರಂಥರಚನೆಯಲ್ಲೂ ಅಪಾರವಾದ ಕಾಣಿಕೆ ಸಲ್ಲಿಸಿದರು. ಇದರಿಂದಾಗಿ ಅವರ ಶಿಷ್ಯಪ್ರಶಿಷ್ಯರು ಮೊದಲಾದ ಶಿಷ್ಯಪರಂಪರೆಯನ್ನೇ ಟಿಪ್ಪಣ್ಯಾಚಾರ್ಯರನ್ನಾಗಿ ಮಾಡಿದ ಖ್ಯಾತಿ ಅವರದು:

> ಯಚ್ಛಿಷ್ಯಶಿಷ್ಯಶಿಷ್ಯಾದ್ಯಾಷ್ಟಿಪ್ಪಣ್ಯಾಚಾರ್ಯಸಂಜ್ಞಿತಾಃ ।
> ತಮಲಂ ಭಾವಬೋಧಾರ್ಯಂ ಭೂಯೋ ಭೂಯೋ ನಮಾಮ್ಯಹಮ್॥

ಅವರ ಸ್ತೋತ್ರದಿಂದ ತಿಳಿದುಬರುವಂತೆ ಅವರ ಆಕೃತಿಯೂ ತುಂಬಾ ಮನೋಹರವಾದದ್ದು :

> ಉದ್ಯನ್ಮಾರ್ತಂಡಸಂಕಾಶಂ ದಂಡಮಾಲಾಕಮಂಡಲೂನ್ ।
> ಧರಂ ಕೌಪೀನಸೂತ್ರಂ ಚ ಸೀತಾರಾಘವಮಾನಸಮ್ ॥

ಶ್ರೀವ್ಯಾಸರಾಜರ ತಾತ್ಪರ್ಯಚಂದ್ರಿಕಾಗ್ರಂಥದ ಹಿರಿಮೆಯನ್ನು ಮೊದಲ ಬಾರಿಗೆ ಗುರುತಿಸಿ, ಅದನ್ನು ತಮ್ಮ ತತ್ತ್ವಪ್ರಕಾಶಿಕಾಭಾವಬೋಧದಲ್ಲಿ ಉಲ್ಲೇಖಿಸುವ ಮೂಲಕ ಅದರ ಮಹತ್ತ್ವದ ಅರಿವು ವಿದ್ವತ್ಪ್ರಪಂಚಕ್ಕೆ ಆಗಲು ಕಾರಣರಾದವರಲ್ಲಿ ಪ್ರಥಮರು ಎಂಬುದು ಸಹ ಇವರ ವೈಶಿಷ್ಟ್ಯ. ಇದರಿಂದ ವ್ಯಕ್ತವಾಗುವ ಇವರ ವಿದ್ಯಾಪಕ್ಷಪಾತ ಅನುಪಮವಾದುದು. ಚಂದ್ರಿಕೆಯನ್ನು ಉಲ್ಲೇಖಿಸುತ್ತಲೇ ಸೂತ್ರ, ಭಾಷ್ಯ ಹಾಗೂ ಟೀಕೆಗಳ ಚಿಂತನೆಯ ಬಗ್ಗೆ ಹೊಸಹೊಳವುಗಳನ್ನು ನೀಡಿದ್ದು ಇವರ ಮತ್ತೊಂದು ಸಾಧನೆ :

> ತಾತ್ಪರ್ಯಚಂದ್ರಿಕಾಯಾಂ ತು ಸಮಾನಾಧಿಕರಣಾನಾಂ ವೇದಾಧ್ಯಯನಾಶ್ರಮಾದಿ-ವಿಷ್ಣುಪಾದೈಕಸಂಶ್ರಯತ್ವಾದೀನಾಂ ಮಧ್ಯೇ ಯಸ್ಯ ಶಮಾದಿವಿಷ್ಣುಪಾದೈಕಸಂಶ್ರಯ-ತ್ವಾದಿಕೇಽಪ್ರಚುರೇಽಧ್ಯಯನಂ ಪ್ರಚುರಂ ಸೋಽಧಮಃ । ಯಸ್ಯ ವಿಷ್ಣುಪಾದೈಕ-ಸಂಶ್ರಯತ್ವಾದಿಕಮೇವಾಪ್ರಚುರಮಧ್ಯಯನಶಮಾದಿಕೇ ಪ್ರಚುರೇ ಸ ಮಧ್ಯಮಃ । ಯಸ್ಯ ತು ವಿಷ್ಣುಪದೈಕಸಂಶ್ರಯತ್ವಾದಿಕಂ ಪ್ರಚುರಮಧ್ಯಯನಶಮನಾದಿಕೇ ತ್ವಪ್ರಚುರೇ ಸ ಉತ್ತಮ ಇತ್ಯರ್ಥ ಇತ್ಯುಕ್ತಮ್ ॥
>
> – ತತ್ತ್ವಪ್ರಕಾಶಿಕಾಭಾವಬೋಧ (೧/೧/೧)

ಮಠದ ಆಡಳಿತಕ್ಕೆ ತಮ್ಮ ಗುರುಗಳ ಆದೇಶದಂತೆ ಹೊಸರೂಪವನ್ನಿತ್ತಿದ್ದು ಸಹ ಇವರ ಸಾಧನೆ. ಅಪಾರ ತಪಃಶಕ್ತಿಯಿಂದ ಆರ್ತರನ್ನು ಉದ್ಧರಿಸುತ್ತಾ ಮಾಡಿದ ಸಂಚಾರಕಾರ್ಯವೂ ವಿಶೇಷರೀತಿಯಲ್ಲಿ ಲೋಕೋಪಕಾರಕ್ಕೆ ಕಾರಣವಾಯಿತು.

ಇಂತಹ ಮಹಾಮಹಿಮರ ಸ್ಮರಣೆ, ಗ್ರಂಥಗಳ ಅಧ್ಯಯನ ಜಿಜ್ಞಾಸುವಿನ ಬಾಳಿಗೆ ಬೆಳಕಾಗುವುದು ನಿಶ್ಚಿತ.

* * * * *

(ಶ್ರೀರಘೂತ್ತಮತೀರ್ಥರ ಜೀವನ ಹಾಗೂ ಕೃತಿಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ನಮ್ಮ ಪ್ರತಿಷ್ಠಾನದ 'ಶ್ರೀರಘೂತ್ತಮತೀರ್ಥರು' ಕೃತಿಯನ್ನು ನೋಡಬಹುದು.)



# ಶ್ರೀಮಧ್ವರು ಕಂಡ ಮಹಾಭಾರತ

– ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀಮಧ್ವಾಚಾರ್ಯರು 'ಸರ್ವಮೂಲ'ವೆಂದು ಪ್ರಸಿದ್ಧವಾಗಿರುವ ತಮ್ಮ ಮೂವತ್ತೇಳು ಗ್ರಂಥಗಳಲ್ಲಿ ''ಮಹಾಭಾರತತಾತ್ಪರ್ಯನಿರ್ಣಯ'' ಮತ್ತು ''ಯಮಕಭಾರತ'' ಎಂಬ ಎರಡು ಕೃತಿಗಳನ್ನು ಮಹಾಭಾರತದ ಮಹತ್ವವನ್ನು ಪ್ರತಿಪಾದಿಸಲೆಂದೇ ಮೀಸಲಿಟ್ಟಿರುವರು. ಮಹಾಭಾರತತಾತ್ಪರ್ಯನಿರ್ಣಯವು ೩೨ ಅಧ್ಯಾಯಗಳಲ್ಲಿರುವ ಐದು ಸಾವಿರಕ್ಕಿಂತ ಹೆಚ್ಚಿನ (ವಿವಿಧ ಛಂದಸ್ಸಿನ) ಶ್ಲೋಕಗಳಲ್ಲಿ ಮಹಾಭಾರತದ ಹೃದಯವನ್ನು ಅನಾವರಣಗೊಳಿಸುವ ಅಪೂರ್ವ ಕೃತಿ. ಮಹಾಭಾರತದ ಮುಖ್ಯ ಕಥಾಸೂತ್ರದೊಂದಿಗೆ ಅದರಲ್ಲಿನ ಸಮಸ್ಯೆಗಳಿಗೆ ಸೂಕ್ತಪರಿಹಾರವನ್ನು ಒದಗಿಸುತ್ತಲೇ ಇಡೀ ಗ್ರಂಥದ ತಾತ್ಪರ್ಯ ನಿರ್ಣಯವನ್ನು ಇದು ಒದಗಿಸುತ್ತದೆ.

ರಾಮಾಯಣದ ನಿರ್ಣಯವನ್ನು ಸಹ ಒಳಗೊಂಡಿರುವ ಈ ಕೃತಿಯಲ್ಲಿ ಹರಿವಂಶಭಾಗವತಾದಿಗಳಲ್ಲಿನ ಶ್ರೀಕೃಷ್ಣಕಥೆಯ ಸಾರಸರ್ವಸ್ವವೂ ಸಂಗ್ರಹೀತ-ವಾಗಿದೆ. ಈ ಅರ್ಥದಲ್ಲಿ ಇದು ಮಹಾಭಾರತತಾತ್ಪರ್ಯನಿರ್ಣಯ ರೂಪದಲ್ಲಿ ಸಮಸ್ತಶಾಸ್ತ್ರಾರ್ಥನಿರ್ಣಯವೇ ಆಗಿದೆ (**ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ** - ೩೨/೧೭೨).

ಮಹಾಭಾರತಕ್ಕೆ ರಚಿತವಾಗಿರುವ ಶ್ಲೋಕರೂಪದ ಸಮಗ್ರವ್ಯಾಖ್ಯಾನ ಎಂಬುದು ಇದರ ವೈಶಿಷ್ಟ್ಯ. ಈ ದೃಷ್ಟಿಯಲ್ಲಿ ಇದಕ್ಕೆ ಸಾಟಿಯಾದ ಮತ್ತೊಂದು ಗ್ರಂಥವೇ ಮಹಾಭಾರತದ ಮೇಲೆ ಕಂಡುಬರುವುದಿಲ್ಲ.

ಮಹಾಭಾರತದ ಮಹಾತಾತ್ಪರ್ಯವಾದ ವಿಷ್ಣುಪಾರಮ್ಯವನ್ನು ಯಮಕಾಲಂಕಾರಭರಿತ ಶ್ಲೋಕಗಳಲ್ಲಿ ಸಂಗ್ರಹಿಸುವ ಪುಟ್ಟ ಕೃತಿ 'ಯಮಕ ಭಾರತ'. ೧೮ ಪರ್ವಗಳ ಭಾರತದ ಸಾರವನ್ನೆಲ್ಲ ಕೇವಲ ೮೧ ಶ್ಲೋಕಗಳಲ್ಲಿ ಸಂಗ್ರಹಿಸಿರುವುದು ಇದರ ವೈಶಿಷ್ಟ್ಯ.

ಭಾಗವತತಾತ್ಪರ್ಯನಿರ್ಣಯವೆಂಬ ಅವರ ಮತ್ತೊಂದು ಕೃತಿಯಲ್ಲಿ ಈ ಎರಡಕ್ಕೂ ಪೂರಕವಾಗುವ ಅನೇಕ ವಿವರಗಳು ದೊರೆಯುತ್ತವೆ.

ಇದರೊಂದಿಗೆ ಅವರ ಗೀತಾಭಾಷ್ಯ, ಗೀತಾತಾತ್ಪರ್ಯಗ್ರಂಥಗಳಲ್ಲೂ ಮಹಾಭಾರತಕ್ಕೆ ಸಂಬಂಧಿಸಿದ ಮುಖ್ಯ ವಿವರಗಳು ಅಡಕವಾಗಿವೆ.

ಈ ಎಲ್ಲ ಗ್ರಂಥಗಳಿಂದ ವ್ಯಕ್ತವಾಗುವ ಮಹಾಭಾರತದ ಬಗೆಗಿನ ಶ್ರೀಮಧ್ವರ ದೃಷ್ಟಿಯನ್ನು ಹೀಗೆ ಸಂಗ್ರಹಿಸಬಹುದು.

ಕಥೆಯ ದೃಷ್ಟಿಯಿಂದ ಮಹಾಭಾರತವು ಒಂದು ಇತಿಹಾಸವಾದರೆ ನಿರೂಪಣೆಯ ದೃಷ್ಟಿಯಿಂದ ಒಂದು ಲೋಕೋತ್ತರ ಮಹಾಕಾವ್ಯ. ಆದರೆ ಮೌಲ್ಯದ ದೃಷ್ಟಿಯಿಂದ ವಿಚಾರ ಮಾಡಿದರೆ ವೇದಾದಿಗಳಂತೆ ಮೂಲತಃ ಅದೊಂದು ಉತ್ಕೃಷ್ಟವಾದ ಶಾಸ್ತ್ರಗ್ರಂಥ, ಅದನ್ನು ರಚಿಸಿದ ಶ್ರೀ ವ್ಯಾಸಮಹರ್ಷಿಗಳು ಯಾರೋ ಒಬ್ಬ ಋಷಿಯಾಗಿರದೆ ಸಾಕ್ಷಾತ್ ಭಗವಂತನ ಅವತಾರವೇ ಆಗಿರುವರು. 'ಕಾರ್ಷ್ಣವೇದ' 'ಪಂಚಮವೇದ' ಮೊದಲಾಗಿ ಪ್ರಸಿದ್ಧವಾಗಿರುವ ಇದು ತನ್ನ ಅಪಾರ ತಾತ್ವಿಕ ಮಹತ್ವದಿಂದಾಗಿ ವೇದಾದಿ ಇತರ ಮೂಲಶಾಸ್ತ್ರಗಳಿಗಿಂತಲೂ ಮಿಗಿಲಾದುದು. ವೇದವನ್ನು ಅರಿಯಲಾಗದ ಜನಗಳೂ ಆತ್ಮೋದ್ಧಾರಕ್ಕೆ ಸಾಧನವಾದ ಧರ್ಮದ ಸ್ವರೂಪವನ್ನು ತಿಳಿಯುವಂತಾಗಲಿ ಎಂದೇ ಭಗವಂತ ವ್ಯಾಸರೂಪದಿಂದ ಇದನ್ನು ಮಾನವ ಕುಲಕ್ಕೆ ಅನುಗ್ರಹಿಸಿರುವನು. ವೇದವನ್ನು ಓದಬಲ್ಲ ಜನಗಳೂ ಸಹ ಇದರ ಅಧ್ಯಯನ ಮಾಡದಿದ್ದಲ್ಲಿ ವೇದಗಳ ಮುಖ್ಯಾರ್ಥದಿಂದ ವಂಚಿತರಾಗುವ ಅಪಾಯ ತಪ್ಪಿದ್ದಲ್ಲ. ವೇದಾದಿ ಸಕಲಶಾಸ್ತ್ರಗಳ ಸಾರಸರ್ವಸ್ವವೂ ಆಗಿರುವುದು ಇದರ ಮತ್ತೊಂದು ಹಿರಿಮೆ. ಇದರ ಭೀಷ್ಮಪರ್ವದಲ್ಲಿ ಬರುವ ಭಗವದ್ಗೀತೆ ಮತ್ತು ಅನುಶಾಸನ ಪರ್ವದಲ್ಲಿ ಬರುವ ವಿಷ್ಣುಸಹಸ್ರನಾಮ ಇದರಲ್ಲಿನ ಅತ್ಯಂತ ಸಾರಭೂತವಾದ ಭಾಗಗಳು.

ರಾಮಾಯಣವು ಮೂಲತಃ ಒಂದು ಶಾಸ್ತ್ರಗ್ರಂಥವೇ ಆಗಿದ್ದರೂ ಅದರಲ್ಲಿ ಮಹಾಭಾರತದ ಕಥೆ ಬಂದಿಲ್ಲ. ಆದರೆ ಮಹಾಭಾರತ ವನಪರ್ವದಲ್ಲಿ ರಾಮಕಥೆಯೂ ನಿರೂಪಿತವಾಗಿರುವುದರಿಂದ ಇದು ರಾಮಾಯಣಕ್ಕಿಂತಲೂ ಮಿಗಿಲಾದುದು. ಹನುಮಂತ, ವಾಲಿ, ಸುಗ್ರೀವ ಮೊದಲಾದ ರಾಮಾಯಣದ ಬಹುತೇಕ ಪಾತ್ರಗಳು ಭೀಮಸೇನ, ಅರ್ಜುನ, ಕರ್ಣ ಮೊದಲಾಗಿ ಮಹಾಭಾರತದಲ್ಲೂ ಪಾಲ್ಗೊಂಡಿವೆ. ಮಹಾಭಾರತವು ಅನಂತರದ ಕಥೆಯಾದ್ದರಿಂದ ಇಂದ್ರಾದಿಸಾಧಕವರ್ಗದ ವಿಶೇಷಸಾಧನಕ್ಕೆ ನಿರ್ಣಾಯಕವೆನ್ನಿಸಿದೆ. ಆದ್ದರಿಂದಲೂ ಮಹಾಭಾರತದ ಮಹತ್ವ ರಾಮಾಯಣದ ಮಹತ್ವವನ್ನು ಮೀರಿಸುತ್ತದೆ.

ವೇದಗಳಿಗೆ ಕನಿಷ್ಠವೆಂದರೂ ಮೂರರ್ಥವಾದರೆ, ಮಹಾಭಾರತಕ್ಕೆ ಹತ್ತಕ್ಕಿಂತ ಕಡಿಮೆ ಇಲ್ಲದ ಅರ್ಥವಿಶೇಷಗಳು ಉಂಟು. ಇದರಲ್ಲಿನ ವಿಷ್ಣುಸಹಸ್ರನಾಮದ



ಭಾಗಕ್ಕಂತೂ ಪ್ರತಿನಾಮಕ್ಕೂ ನೂರರ್ಥ ಉಂಟು. ಇಂತಹ ಅರ್ಥ ವಿಸ್ತಾರದ ದಾಖಲೆ ಮಹಾಭಾರತದ ಮಹತ್ವದ ಮತ್ತೊಂದು ಮುಖ. ಮನ್ವಾದಿ, ಆಸ್ತಿಕಾದಿ ಮತ್ತು ಉಪರಿಚರಾದಿ ಎಮಬ ಮೂರು ವಿಧದ ಅರ್ಥ ಇದರ ಮತ್ತೊಂದು ವೈಶಿಷ್ಟ್ಯ. ಭಗವದ್ಭಕ್ತರಾದ ಪಾಂಡವರ ಕಥೆ ಎಂದಷ್ಟೇ ತಿಳಿಯುವುದು 'ಆಸ್ತಿಕಾದಿ ಅರ್ಥ'. ಇದರಲ್ಲಿನ ಪ್ರತಿಪದವೂ ಸರ್ವೋತ್ತಮನಾದ ಭಗವಂತನ ಒಂದೊಂದು ಹೆಸರು ಎಂದು ತಿಳಿದರೆ ಅದು 'ಉಪರಿಚರಾದಿ ಅರ್ಥ'. ಧರ್ಮರಾಜನು 'ಧರ್ಮ'ಕ್ಕೂ ಭೀಮಸೇನನು ಭಕ್ತಿ, ಜ್ಞಾನ, ವೈರಾಗ್ಯ, ಪ್ರಜ್ಞಾ, ಮೇಧಾ, ಧೃತಿ, ಸ್ಥಿತಿ, ಯೋಗ, ಪ್ರಾಣ, ಬಲ ಎಂಬ ಹತ್ತು ಗುಣಗಳಿಗೂ, ಅರ್ಜುನನು ಶ್ರವಣ, ಮನನ ಮತ್ತು ಧ್ಯಾನಗಳಿಗೂ, ನಕುಲ ಸಹದೇವರು ಶೀಲ, ವಿನಯಗಳಿಗೂ, ದ್ರೌಪದಿಯು ವಿದ್ಯೆಗೂ ಸಂಕೇತ ಎಂದು ತಿಳಿಯುವ ಅರ್ಥ 'ಮನ್ವಾದಿ' ಎನ್ನಿಸುತ್ತದೆ.

ಭಗವಂತನಿಗೆ ಮಿಗಿಲಾದ ಪರವಸ್ತುವೇ ಇಲ್ಲ ಎಂಬ ಪರಮತತ್ತ್ವವೇ ಮಹಾಭಾರತದ ಪರಮ ತಾತ್ಪರ್ಯ. ಇದಕ್ಕೆ ಆದಿಯಿಂದ ಅಂತ್ಯದವರೆಗೆ ಕಂಡುಬರುವ 'ನಾರಾಯಣಂ ಸುರಗುರುಂ' 'ನಾರಾಯಣಂ ನಮಸ್ಕೃತ್ಯ' 'ವಿಷ್ಣುಃ ಸರ್ವತ್ರ ಗೀಯತೇ' ಇತ್ಯಾದಿ ವಾಕ್ಯಗಳೇ ಸಾಕ್ಷಿ. ಉದ್ದಕ್ಕೂ ಕಂಡುಬರುವ ಕೃಷ್ಣ ಪಾರಮ್ಯಕ್ಕಿಂತ ಮಿಗಿಲಾದ ಬೇರಾವ ಪುರಾವೆಯೂ ಇದಕ್ಕೆ ಬೇಕಿಲ್ಲ. ಕೃಷ್ಣನ ಹಿರಿಮೆಯನ್ನು ಸಾರದ ಒಂದು ಘಟ್ಟವೂ ಮಹಾಭಾರತದಲ್ಲಿಲ್ಲ. ಶ್ರೀಕೃಷ್ಣನದು ಕಪಟನಾಟಕವಲ್ಲ. ಕಪಟಗಳನ್ನು ಸೆದೆಬಡಿಯಲೆಂದು ತೋರಿದ ಮಹಾನಾಟಕ. ಅವನು ಅನಂತಗುಣಗಳ ಖಣಿ ಮತ್ತು ಸಕಲ ದೋಷದೂರ ಮತ್ತು ಸರ್ವತಂತ್ರಸ್ವತಂತ್ರ. ಆದ್ದರಿಂದಲೇ ಅವನು ಗುಣಿಗಳಾದ ಪಾಂಡವರಿಗೆ ಒಲಿದ; ದೋಷಿಗಳಾದ ಕೌರವರಿಗೆ ಮುನಿದ. ಅವನ ಒಲುಮೆಗೆ ಸಾಧನ ಮಹಾತ್ಮ್ಯಜ್ಞಾನವೇ ಹೊರತು ಮೌಢ್ಯವಲ್ಲ. ಅವನ ಇಚ್ಛೆಗೆ ವಿರುದ್ಧವಾಗಿ ಜಗತ್ತಿನ ಯಾವ ಘಟನೆಯೂ ನಡೆಯುವುದಿಲ್ಲ.

ಶ್ರೀಕೃಷ್ಣನ ಅನಂತರದ ಪ್ರಧಾನಪಾತ್ರ ಯಾವುದು ಎಂಬ ಜಿಜ್ಞಾಸೆ ಮಹಾಭಾರತದಷ್ಟೇ ಹಳೆಯದು. ಮಹಾಭಾರತವನ್ನು ಸರಿಯಾಗಿ ಓದದ ಯಾರನ್ನೂ ಈ ಚಿಂತೆ ಕಾಡದೆ ಬಿಟ್ಟಿಲ್ಲ. ಅರ್ಜುನ, ಕರ್ಣ ಮೊದಲಾದವರನ್ನು ಪ್ರಧಾನಪಾತ್ರಗಳೆಂದು ತಿಳಿದು ಕೃತಿ ರಚನೆ ಮಾಡಿದವರೂ ಇರುವರು. ಮಹಾಭಾರತದ ಮಾತುಗಳನ್ನು ಅದರಲ್ಲಿನ ಎಲ್ಲಾ ಘಟನೆಗಳನ್ನೂ ಸಮಗ್ರವಾಗಿ ವಿವೇಚಿಸಿದವರಿಗೆ ಶ್ರೀಕೃಷ್ಣನ ಅನಂತರದ ಸ್ಥಾನ ಆತನ ಪರಮಭಕ್ತನಾದ

ಭೀಮಸೇನನದು ಎಂಬಲ್ಲಿ ಯಾವ ಸಂಶಯವೂ ಉಳಿಯುವುದಿಲ್ಲ ಎಂಬುದನ್ನು ಶ್ರೀಮಧ್ವರು ತೋರಿಸಿರುವರು. ಆದಿಪರ್ವದ ಅರಗಿನಮನೆ, ಹಿಡಿಂಬವಧೆ, ಬಕವಧೆ ಪ್ರಸಂಗಗಳಲ್ಲಿ ಮಿಂಚುವ ಶ್ರೀಭೀಮಸೇನನ ಶೌರ್ಯ ಇತರ ಪಾಂಡವರಿಗೆ ಶ್ರೀರಕ್ಷೆಯಾಯಿತು. ಸಭಾಪರ್ವದ ಜರಾಸಂಧವಧೆ, ದುರ್ಯೋಧನ ಸಭೆಯಲ್ಲಿನ ಪ್ರತಿಜ್ಞೆ, ವನಪರ್ವದ ಕಿರ್ಮೀರವಧೆ, ಸೌಗಂಧಿಕಪುಷ್ಪಪ್ರಸಂಗ, ಜಟಾಸುರ ವಧೆ, ವಿರಾಟಪರ್ವದ ಜೀಮೂತವಧೆ, ಕೀಚಕವಧೆ, ಉದ್ಯೋಗಪರ್ವದಲ್ಲಿನ ಶ್ರೀಕೃಷ್ಣಸಂಧಾನಪ್ರಸಂಗ, ಯುದ್ಧಪರ್ವಗಳಲ್ಲಿನ ದುರ್ಯೋಧನ ದುಃಶಾಸನಾದಿಗಳ ಹನನ, ಕರ್ಣ , ಶಲ್ಯ ಮತ್ತು ಅಶ್ವತ್ಥಾಮರ ಪರಾಭವ, ನಾರಾಯಣಾಸ್ತ್ರಪ್ರಸಂಗ ಮೊದಲಾದ ಸಕಲ ಮುಖ್ಯಪ್ರಸಂಗಗಳೂ 'ಭೀಮಸೇನಸಮೋ ನಾಸ್ತಿ' ಎಂಬುದಕ್ಕೆ ನಿದರ್ಶನ. ವನಪರ್ವದ ಆರಂಭದಲ್ಲಿ ಬರುವ ಯುಧಿಷ್ಠಿರನಿಗೆ ಭೀಮನು ನೀಡುವ ಕರ್ತವ್ಯಕರಣದ ಮಹತ್ವದ ಸಂದೇಶವು ಒಂದರ್ಥದಲ್ಲಿ ಭೀಮಗೀತೆಯೇ ಆಗಿದೆ. ಅರ್ಜುನನನ್ನು ಯುದ್ಧಕ್ಕೆ ಅಣಿಮಾಡಿದ ಶ್ರೇಯಸ್ಸು ಶ್ರೀಕೃಷ್ಣಗೀತೆಯದಾದರೆ ಯುಧಿಷ್ಠಿರನನ್ನು ಯುದ್ಧಕ್ಕೆ ಮಾನಸಿಕವಾಗಿ ಸ್ಥಿರಗೊಳಿಸಿದ ಶ್ರೇಯಸ್ಸು ಶ್ರೀಭೀಮಗೀತೆಯದು. ಜೀವನದುದ್ದಕ್ಕೂ ತನ್ನ ಕರ್ತವ್ಯಕರ್ಮದಲ್ಲಿ ಎಂದೂ ಎಚ್ಚರ ತಪ್ಪದ ಪರಿಶುದ್ಧಚೇತನ ಎಂಬುದು ಭಿಮಸೇನನ ಹಿರಿಮೆ 'ಶುದ್ಧೇ ಭಾಗವತೇ ಧರ್ಮನಿರತೋ ಯದ್ವೃಕೋದರ. ಈ ಎತ್ತರಕ್ಕೆ ಮಹಾಭಾರತದ ಬೇರಾವ ಪಾತ್ರವೂ ಮುಟ್ಟುವುದಿಲ್ಲ.

ದ್ರೌಪದಿಯ ಪಂಚಪತಿತ್ವ ಮಹಾಭಾರತದ ಅತ್ಯಂತ ಮುಖ್ಯ ಸಮಸ್ಯೆಗಳಲ್ಲೊಂದು. ಶ್ರೀಮಧ್ವರು ಮಹಾಭಾರತಾದಿಗಳಲ್ಲಿನ ವಾಕ್ಯಗಳನ್ನು ಉಲ್ಲೇಖಿಸಿ ಇದನ್ನು ವಿವೇಚಿಸಿರುವ ರೀತಿ ಅನ್ಯಾದೃಶವಾದುದು. ದ್ರೌಪದಿಯ ವಿವಾಹ ಎಂದೂ ಒಬ್ಬ ಸ್ತ್ರೀಗೆ ಐವರು ಪುರುಷರೊಂದಿಗೆ ನಡೆದ ವಿವಾಹವಲ್ಲ. ಆಕೆಯ ಶರೀರದಲ್ಲಿ ಶಾಪಗ್ರಸ್ತರಾದ ಪಾರ್ವತೀ, ಶಚೀ, ಶಾಮಲಾ ಮತ್ತು ಉಷಾ ಎಂಬ ಇತರ ದೇವತಾಸ್ತ್ರೀಯರೂ ಇರುವರು. ಆಕೆ ಮೂಲತಃ ವಾಯುಪತ್ನಿಯಾದ ಭಾರತಿ. ಆದ್ದರಿಂದ ಅಲ್ಲಿ ವಿವಾಹ ನಡೆದದ್ದು ಪ್ರತ್ಯೇಕವಾಗಿ ಧರ್ಮರಾಜ (ಯಮಧರ್ಮ) ಶಾಮಲಾ, ಭೀಮ (ವಾಯು) ಭಾರತೀ, ಅರ್ಜುನ (ಇಂದ್ರ) ಶಚೀ, ನಕುಲ ಸಹದೇವರು ಉಷಾ; ಈ ಕ್ರಮದಲ್ಲಿ ಮಾತ್ರ. ಅವರೆಲ್ಲ ಪ್ರತ್ಯೇಕ ಮಂಗಲಸೂತ್ರ ಕಟ್ಟಿಯೇ ವಿವಾಹವಾದರು. ಇದನ್ನೆಲ್ಲಾ ವ್ಯಾಸದತ್ತ ದಿವ್ಯದೃಷ್ಟಿಯಿಂದ ಸಾಕ್ಷಾತ್ಕರಿಸಿಕೊಂಡ ಮೇಲೆಯೇ ದ್ರುಪದರಾಜನು ವಿವಾಹಕ್ಕೆ ಸಮ್ಮತಿಸಿದ. ಅಶ್ವತ್ಥಾಮರು ಆಜೀವ



ಬ್ರಹ್ಮಚಾರಿಗಳಾಗಿ ಉಳಿದಿದ್ದರಿಂದಲೇ ದ್ರೌಪದೀಶರೀರದಲ್ಲಿನ ಪಾರ್ವತಿಗೆ ಮಾತ್ರ ವಿವಾಹವಾಗಲೇ ಇಲ್ಲ. ಗಾಳಿಯಲ್ಲಿ ಆಮ್ಲಜನಕಾದಿ ವಿಭಿನ್ನ ಸ್ವಭಾವದ ಅನಿಲಗಳಿದ್ದರೂ ದೀಪ ಉರಿಯುವಾಗ ಅದು ಸ್ವೀಕರಿಸುವುದು ಆಮ್ಲಜನಕವನ್ನು ಮಾತ್ರ ಎಂಬ ದೃಷ್ಟಾಂತವನ್ನು ಇಲ್ಲಿ ಗಮನಿಸಬಹುದು.

ಅರ್ಜುನ, ಧರ್ಮರಾಜಾದಿಗಳೂ ಸಹ ಧರೆಗಿಳಿದ ದೇವತೆಗಳೇ. ಅವರು ಒಮ್ಮೊಮ್ಮೆ ತಪ್ಪಾಗಿ ನಡೆದುಕೊಂಡರೂ ಸಹ ಅದರಿಂದ ಮೂಲವ್ಯಕ್ತಿತ್ವಕ್ಕೆ ಯಾವುದೇ ಕಳಂಕವೂ ಉಂಟಾಗಲಿಲ್ಲ. ಭೀಷ್ಮ ದ್ರೋಣ ಕರ್ಣರು ಮೂಲತಃ ಉತ್ತಮಚೇತನರೇ ಆದರೂ ದುರ್ಯೋಧನನ ಅನ್ನದ ಹಂಗು ಎಂಬ ಕಾರಣಕ್ಕಾಗಿ ಅವನ ಪಕ್ಷಕ್ಕೆ ಸೇರಿದವರು. ತಮ್ಮ ದೇಹವನ್ನು ಅವನ ಕಾರ್ಯಕ್ಕಾಗಿ ಬಲಿಕೊಟ್ಟರೂ ಮಾನಸಿಕವಾಗಿ ಧರ್ಮದ ದೀಕ್ಷೆಯನ್ನು ತಪ್ಪಿಸಿದವರಲ್ಲ. ಆದ್ದರಿಂದಲೇ ಅವರ ಮೂಲಭೂತ ಹಿರಿಮೆಗೆ ಅದರಿಂದ ಧಕ್ಕೆ ಉಂಟಾಗಲಿಲ್ಲ. ಆದರೆ ತನ್ನ ಉದ್ಧಾರಕ್ಕೆ ಒದಗಿದ ಸಕಲ ಅವಕಾಶಗಳನ್ನು ಹಾಳುಮಾಡಿಕೊಂಡ ದುರಂತಮಯವ್ಯಕ್ತಿತ್ವ ದುರ್ಯೋಧನನದು. ತನ್ನ ಜೀವನದಲ್ಲಿ ತನ್ನ ತಪ್ಪಿಗೆ ಒಮ್ಮೆಯೂ ಪಶ್ಚಾತ್ತಾಪ ಪಡದೆ ತಾನು ಸದಾ ಅನ್ಯಾಯ ಮಾಡುತ್ತಿದ್ದರೂ ಪಾಂಡವರನ್ನೇ ಅನ್ಯಾಯ ಮಾಡಿದವರೆಂದು ದೂರುತ್ತಾ ಸತ್ತವನು ಅವನು. ಅವನ ತಮ್ಮಂದಿರೆಲ್ಲ ಅವನನ್ನು ಎಲ್ಲ ರೀತಿಯಿಂದ ಅನುಸರಿಸಿದ ವಿಚಿತ್ರವ್ಯಕ್ತಿಗಳು. ಹೀಗಾಗಿ ಮಹಾಭಾರತವು ಕುರುಪಾಂಡವರ ಯುದ್ಧದ ಮೂಲಕ ಧರ್ಮಾಧರ್ಮಗಳ ಸತತಸಂಘರ್ಷವನ್ನು ಆತ್ಯಂತಿಕವಾಗಿ ಧರ್ಮದ ವಿಜಯವನ್ನೂ ಸಾರುವ ಆಧ್ಯಾತ್ಮಿಕ ಕೃತಿ.

ಜಯ (೧೮) ಎಂಬ ಹೆಸರಿನ ಮಹಾಭಾರತದ ಮಹಾಪರ್ವಗಳೂ ಒಟ್ಟು ೧೮, ಕುರುಪಾಂಡವರ ಒಟ್ಟು ಸೇನೆ ೧೮ ಅಕ್ಷೋಹಿಣಿ, ಮಹಾಭಾರತದ ಯುದ್ಧ ನಡೆದದ್ದು ಒಟ್ಟು ೧೮ ದಿನಗಳು, ಮಹಾಪುರಾಣಗಳ ಸಂಖ್ಯೆ ೧೮. ಜರಾಸಂಧನು ಶ್ರೀಕೃಷ್ಣನಿಂದ ಪರಾಜಿತನಾದದ್ದು ಒಟ್ಟು ೧೮ ಸಲ. ಭಾರತ ಸಾರವಾದ ಭಗವದ್ಗೀತೆಯ ಒಟ್ಟು ಅಧ್ಯಾಯಗಳ ಸಂಖ್ಯೆಯೂ ೧೮, ಇನ್ನೂ ಅನೇಕ ರೀತಿಯಲ್ಲಿ ಹದಿನೆಂಟರ ನಂಟು ಮಹಾಭಾರತಕ್ಕೂ ಶಾಸ್ತ್ರಕ್ಕೂ ಉಂಟು. ಈ ಹದಿನೆಂಟರ ಒಗಟನ್ನು ಒಡೆದ ಶ್ರೇಯಸ್ಸೂ ಸಹ ಆಚಾರ್ಯ ಶ್ರೀ ಮಧ್ವರದೇ ಆಗಿದೆ. ಧರ್ಮ (ಯುಧಿಷ್ಠಿರ)ಭಕ್ತಿ, ಜ್ಞಾನ, ವೈರಾಗ್ಯ, ಪ್ರಜ್ಞಾ, ಮೇಧಾ, ಧೃತಿ, ಸ್ಥಿತಿ, ಯೋಗ, ಪ್ರಾಣ, ಬಲ (ಭೀಮಸೇನ) ಶ್ರವಣ, ಮನನ ಧ್ಯಾನ (ಅರ್ಜುನ) ಶೀಲ, ವಿನಯ(ನಕುಲ ಸಹದೇವರು) ವಿದ್ಯಾ (ದ್ರೌಪದಿ) ಮತ್ತು ಭಗವಂತ (ಶ್ರೀಕೃಷ್ಣ) ಈ ಹದಿನೆಂಟೂ ಮನುಷ್ಯನ ಆತ್ಯಂತಿಕ

ಉನ್ನತಿಯ ಪರಮ ಸಾಧನಗಳು ಎಂಬುದೇ ಮಹಾಭಾರತಾದಿ ಸಕಲಶಾಸ್ತ್ರಗಳ ಸಾರವೆಂಬುದು ೧೮ಕ್ಕೆ ಅವರು ನೀಡಿದ ವ್ಯಾಖ್ಯೆ.

ಆಧ್ಯಾತ್ಮಿಕ ಮೊದಲಾದ ಅರ್ಥಬಾಹುಲ್ಯವನ್ನು ತಿಳಿಸಿ ಮಹಾಭಾರತವನ್ನು ಮೂಲತಃ ಒಂದು ಶ್ರೇಷ್ಠ ತತ್ತ್ವಶಾಸ್ತ್ರವೆಂದು ತಿಳಿಸಿದ ಏಕಮಾತ್ರ ಮತಾಚಾರ್ಯರು ಎಂಬ ಅಸಾಧಾರಣ ಮಹತ್ವ ಶ್ರೀ ಮಧ್ವಾಚಾರ್ಯರದು ಎಂಬ ಡಾ. ವಿ.ಎಸ್.ಸುಕ್ಥಂಕರ್ ಅವರ ಮಾತು ಇಲ್ಲಿ ಸ್ಮರಣೀಯ.

* * * * *


**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

**ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ**

ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನದೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತದೇವತೆಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| ೧. ಮಹಾಪೋಷಕರು (ಆಜೀವ ಸದಸ್ಯರು) | ರೂ. ೧,೦೦,೦೦೦ |
| ೨. ಪೋಷಕರು (೧೦ ವರ್ಷಗಳ ಸದಸ್ಯತ್ವ) | ರೂ. ೫೦,೦೦೦ |
| ೩. ವಾರ್ಷಿಕ ಸದಸ್ಯರು | ಪ್ರತಿವರ್ಷ ರೂ. ೧೦,೦೦೦ |
| ೪. ಸಾಮಾನ್ಯ ಸದಸ್ಯರು | ಪ್ರತಿವರ್ಷ ರೂ. ೨,೫೦೦ |

ವಿ.ಸೂ. : ಆಸಕ್ತರು 'ಗೋವರ್ಧನಗಿರಿ ವಿಶ್ವಸ್ತ ಮಂಡಳಿ', ಶ್ರೀಪೇಜಾವರಮಠ ಉಡುಪಿ - ಇವರಿಗೆ ನಗದು, ಚೆಕ್, ಡಿಡಿ ಮೂಲಕ ಸೇವೆ ಸಲ್ಲಿಸಬಹುದು.




# ರಾಮಾಯಣ ಹಾಗೂ ಮಹಾಭಾರತದಲ್ಲಿ ದಿಕ್ಪಾಲಕರು ಹಾಗೂ ನವಗ್ರಹಗಳು

- ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ

## ರಾಮಾಯಣದಲ್ಲಿ ದಿಕ್ಪಾಲಕರು

ಪೂರ್ವದಿಕ್ಕಿನ ಅಧಿಪತಿ ಇಂದ್ರ; ವಾಲಿ ಹಾಗೂ ಕುಶ ಇಂದ್ರಾವತಾರರು. ಆಗ್ನೇಯದಿಕ್ಕಿನ ಅಧಿಪತಿ ಅಗ್ನಿ; ನೀಲ ಹಾಗೂ ಲವ ಅಗ್ನಿಯ ಅವತಾರರು. ಯಮ ದಕ್ಷಿಣದಿಕ್ಪಾಲಕ; ಜಾಂಬವಂತ ಯಮಧರ್ಮನ ಅವತಾರ. ನಿರ್ಋತಿ ನೈಋತ್ಯದ ಅಧಿಪತಿ; ದುರ್ಮುಖ ನಿರ್ಋತಿಯ ಅವತಾರ. ವರುಣ ಪಶ್ಚಿಮದಿಕ್ಪಾಲಕ; ಸುಷೇಣ ವರುಣಾವತಾರ. ಕುಬೇರ ಉತ್ತರದಿಕ್ಪಾಲಕ; ಕಥ್ನ ಕುಬೇರನ ಅವತಾರ. ಚಂದ್ರನೂ ಉತ್ತರದಿಕ್ಪಾಲಕನೇ; ಇವನು ಅಂಗದ. ಈಶಾನ್ಯದಿಕ್ಕಿನ ಅಧಿಪತಿ ಶಿವ; ಇವರು ನೇರವಾಗಿಯೇ ಶ್ರೀರಾಮದೇವರೊಂದಿಗೆ ಯುದ್ಧಕ್ಕೆ ನಿಂತು ಪರಾಜಿತರಾಗಿ ಪಶ್ಚಾತ್ತಾಪಪಟ್ಟವರು. ಅಧೋಲೋಕಗಳ ದಿಕ್ಪಾಲಕ ಶೇಷ; ಈತ ಲಕ್ಷ್ಮಣ. ಊರ್ಧ್ವದಿಗಧಿಪತಿ ಬ್ರಹ್ಮದೇವರು; ಜಾಂಬವಂತ, ಸುಗ್ರೀವ ಮೊದಲಾದವರಲ್ಲಿ ಬ್ರಹ್ಮದೇವರು ನೆಲೆಸಿದ್ದರು. ಹನುಮಂತನಂತೂ ಸಾಕ್ಷಾತ್ ಭಾವಿಬ್ರಹ್ಮ. ಹೀಗೆ ದಿಕ್ಪಾಲಕರು ರಾಮಾಯಣದಲ್ಲಿ ಪಾಲ್ಗೊಂಡಿರುವುದು ಗಮನಾರ್ಹ.

ಅವ್ಯಾಕೃತಾಕಾಶಕ್ಕಂತೂ ಸಾಕ್ಷಾತ್ ಮಹಾಲಕ್ಷ್ಮೀ ಅಭಿಮಾನಿದೇವತೆ; ಇವರು ಸೀತಾದೇವಿ(ಶ್ರೀದೇವೀ); ವೇದವತಿ ಇವರ ಇನ್ನೊಂದು ರೂಪ. ಶ್ರೀಹರಿಯಾದ ಶ್ರೀರಾಮ ಸಾಕ್ಷಾತ್ ಮಹಾಲಕ್ಷ್ಮೀಪತಿಯಾದ ಸರ್ವೇಶ.

## ಮಹಾಭಾರತದಲ್ಲಿ ದಿಕ್ಪಾಲಕರು

ಪೂರ್ವದಿಕ್ಕಿನ ಅಧಿಪತಿ ಇಂದ್ರ; ಅರ್ಜುನ ಇಂದ್ರಾವತಾರ. ಆಗ್ನೇಯದಿಕ್ಕಿನ ಅಧಿಪತಿ ಅಗ್ನಿ; ಧೃಷ್ಟದ್ಯುಮ್ನ ಅಗ್ನಿಯ ಅವತಾರ. ಯಮ ದಕ್ಷಿಣದಿಕ್ಪಾಲಕ; ಈತ ಧರ್ಮರಾಜ, ವಿದುರ ಹಾಗೂ ಜಾಂಬವಂತ ಎಂಬ ಮೂರು ರೂಪಗಳಲ್ಲಿದ್ದ. ನಿರ್ಋತಿ ನೈಋತ್ಯದ ಅಧಿಪತಿ; ಘಟೋತ್ಕಚ ನಿರ್ಋತಿಯ ಅವತಾರ. ವರುಣ ಪಶ್ಚಿಮದಿಕ್ಪಾಲಕ; ಶಂತನು ವರುಣಾವತಾರ. ವಾಯವ್ಯದಿಕ್ಕಿನ ಅಧಿಪತಿ ಕೋಣವಾಯು; ಯುಯುತ್ಸು ನಾಸಿಕಾಭಿಮಾನಿ ವಾಯು. ಕುಬೇರ ಉತ್ತರದಿಕ್ಪಾಲಕ; ಭಗದತ್ತ ಕುಬೇರನ ಅವತಾರ. ಚಂದ್ರನೂ ಉತ್ತರದಿಕ್ಪಾಲಕನೇ;

ಇವನು ಅಭಿಮನ್ಯು. ಈಶಾನ್ಯದಿಕ್ಕಿನ ಅಧಿಪತಿ ಶಿವ; ಅಶ್ವತ್ಥಾಮರು ಶಿವನ ಅವತಾರ. ಅಧೋಲೋಕಗಳ ದಿಕ್ಪಾಲಕ ಶೇಷ; ಈತ ಬಲರಾಮ. ಊರ್ಧ್ವ-ದಿಗಧಿಪತಿ ಬ್ರಹ್ಮದೇವರು; ಇವರು ಭೀಷ್ಮ ದ್ರೋಣರಲ್ಲಿ ಒಂದಂಶದಿಂದ ನೆಲೆಸಿದ್ದರು. ಭೀಮಸೇನನಂತೂ ಸಾಕ್ಷಾತ್ ಭಾವಿಬ್ರಹ್ಮ. ಹೀಗೆ ಹತ್ತು ದಿಕ್ಕುಗಳ ಅಧಿಪತಿಗಳೂ ಮಹಾಭಾರತದಲ್ಲಿ ಪಾಲ್ಗೊಂಡಿರುವುದು ಗಮನಾರ್ಹ.

ಭೂತಾಕಾಶಕ್ಕೆ ಅಭಿಮಾನಿದೇವತೆಯಾದ ಗಣೇಶ ಚಾರುದೇಷ್ಣ ಎಂಬ ನಾಮದಿಂದ ಕೃಷ್ಣರುಗ್ಮಿಣಿಯರ ಪುತ್ರನಾಗಿ ಅವತರಿಸಿದ್ದ. ಅವ್ಯಾಕೃತಾಕಾಶಕ್ಕಂತೂ ಸಾಕ್ಷಾತ್ ಮಹಾಲಕ್ಷ್ಮೀ ಅಭಿಮಾನಿದೇವತೆ; ಇವರು ರುಗ್ಮಿಣೀ (ಶ್ರೀದೇವೀ), ಸತ್ಯಭಾಮಾ (ಭೂದೇವಿ) ಹಾಗೂ ದುರ್ಗಾದೇವಿ. ಶ್ರೀಹರಿಯಾದ ಶ್ರೀಕೃಷ್ಣ ಸಾಕ್ಷಾತ್ ಮಹಾಲಕ್ಷ್ಮೀಪತಿಯಾದ ಸರ್ವೇಶ.

### ಮಹಾಭಾರತದಲ್ಲಿ ನವಗ್ರಹಗಳು

ನವಗ್ರಹಗಳಲ್ಲಿ ಗ್ರಹರಾಜನಾದ ಸೂರ್ಯ ಕರ್ಣನಾದ; ಚಂದ್ರನ ಅಂಶ ಅಭಿಮನ್ಯುವಿನಲ್ಲಿತ್ತು. ಮಂಗಳ ಅರ್ಜುನಪುತ್ರನಾದ ಇರಾವಂತ; ಬುಧ ಅಭಿಮನ್ಯು; ಗುರು ಬೃಹಸ್ಪತಿಯಂತೂ ದ್ರೋಣಾಚಾರ್ಯರು; ಉದ್ಧವ ಅವರ ಇನ್ನೊಂದು ರೂಪ; ಶುಕ್ರಶಿಷ್ಯನಾದ ಕಣಿಕ ಕೌರವರ ಗುರುವಾಗಿದ್ದ. ರಾಹುವಿನ ಅಂಶ ಭೀಷ್ಮಕರಾಜನಲ್ಲಿತ್ತು. ಹೀಗೆ ನವಗ್ರಹಗಳು ಒಂದು ರೀತಿಯಲ್ಲಿ ಪಾಲ್ಗೊಂಡಿರುವುದು ಗಮನಾರ್ಹ.


### ಅಂತರ್ಜಾಲದ ಮೂಲಕ ನೇರವಾಗಿ ಭಾಗವತದ ಪಾಠ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರು ಕಳೆದ ಒಂದು ವರ್ಷದಿಂದ ಪ್ರತಿನಿತ್ಯ ಬೆಳಿಗ್ಗೆ ೮.೦೦ ರಿಂದ ೯.೩೦ರವರೆಗೆ ಶ್ರೀಮದ್ಭಾಗವತದ ಪಾಠವನ್ನು 'ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ'ದ ಸಭಾಂಗಣದಲ್ಲಿ ನಡೆಸಿ-ಕೊಡುತ್ತಿರುವರು. ಪರಮಪೂಜ್ಯ ಶ್ರೀಪಲಿಮಾರು ಮಠಾಧೀಶರಾದ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ಅನುಗ್ರಹದಿಂದ ಜಿಜ್ಞಾಸುಗಳ ಅನುಕೂಲಕ್ಕಾಗಿ ಈಗ ಅಂತರ್ಜಾಲದ ಮೂಲಕ ಪಾಠವನ್ನು ನೇರಪ್ರಸಾರ ಮಾಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಆಸಕ್ತರು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಅಂತರ್ಜಾಲದ ವಿಳಾಸ: www.livepravachana.com

ಸಮಯ: ಬೆಳಿಗ್ಗೆ ೮.೦೦ ರಿಂದ ೯.೩೦ ಘಂಟೆವರೆಗೆ




# ಧನುರ್ಮಾಸ ಮಹಿಮಾ

(೧೬.೧೨.೦೯ ರಿಂದ ಪ್ರಾರಂಭವಾಗುವ ಧನುರ್ಮಾಸದ ನಿಮಿತ್ತ ಲೇಖನ)


– ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ


ಕೋದಂಡಸ್ಥೇ ಸವಿತರಿ ಮುದ್ಗಾನ್ನಂ ಯೋ ನಿವೇದಯೇತ್ ।
ಸಹಸ್ರವಾರ್ಷಿಕೀ ಪೂಜಾ ದಿನೇನೈಕೇನ ಸಿದ್ಧ್ಯತಿ ॥
ಯಥಾ ತೃಪ್ಯೇತ್ ಧನುರ್ಮಾಸೇ ಮುದ್ಗಾನ್ನೇನ ರಮಾಪತಿಃ ।
ನ ತಥಾ ವ್ರತದಾನಾದ್ಯೈರ್ನ ತಪೋಭಿರ್ನ ಚಾಧ್ವರೈಃ ॥
ಕೋದಂಡಸ್ಥೇ ದಿವಾನಾಥೇ ಯೋ ಮುದ್ಗಾನ್ನಂ ಸಹಾರ್ದ್ರಕಮ್ ।
ನಿವೇದಯೇದ್ ಹರೇಃ ಸಮ್ಯಗ್ ಜಿತ್ವಾ ಶತ್ರೂನ್ ಕ್ಷಣೇನ ಸಃ ॥
ಸದಧ್ಯಾರ್ದ್ರಕಮುದ್ಗಾನ್ನಂ ಯೋ ಧನುರ್ಮಾಸಿ ವಿಷ್ಣವೇ ।
ಸಮರ್ಪಯೇತ್ ಸ ದೀರ್ಘಾಯುರ್ಧನಾಢ್ಯೋ ವೇದಪರಾಗಃ ॥
ಯಂ ಯಂ ಕಾಮಯತೇ ಕಾಮಂ ತಂ ತಂ ಪ್ರಾಪ್ಯ ಸುದುರ್ಲಭಮ್ ।
ಸ ಸ್ಯಾದ್ ಯೋಗೀ ಸುಧೀಃ ಶ್ರೀಮಾನ್ ವೈಷ್ಣವೋ ಜನ್ಮಜನ್ಮನಿ ॥

– ಆಗ್ನೇಯಪುರಾಣ

ಧನುರ್ಮಾಸದಲ್ಲಿ ಮುದ್ಗಾನ್ನ(ಹುಗ್ಗಿ)ವನ್ನು ಶ್ರೀಹರಿಗೆ ನಿವೇದಿಸುವವರಿಗೆ ಸಾವಿರ ವರ್ಷಗಳ ಪೂಜಾಫಲವು ಒಂದೇದಿನದಲ್ಲಿ ಲಭಿಸುತ್ತದೆ. ಧನುರ್ಮಾಸದಲ್ಲಿ ಹುಗ್ಗಿಯ ನೈವೇದ್ಯದಿಂದ ಶ್ರೀಪತಿಯು ಸಂತೋಷಿಸುವಂತೆ ಬೇರೆ ಯಾವ ವ್ರತಾದಿಗಳಿಂದಲೂ ಒಲಿಯಲಾರನು. ಶತ್ರುಜಯ, ದೀರ್ಘಾಯುಷ್ಯ, ಧನಸಂಪತ್ತಿ, ವೇದಾದಿಶಾಸ್ತ್ರಾಭ್ಯಾಸ, ಮೊದಲಾದ ಎಲ್ಲಕ್ಕೂ ಧನುರ್ಮಾಸದ ಪೂಜೆಯು ಸಾಧನವಾಗಿದೆ; ಇದರ ಆಚರಣೆಯಿಂದ ಬಯಕೆಗಳೆಲ್ಲವೂ ಪೂರೈಸುತ್ತವೆ. ಯೋಗವು ಸಿದ್ಧಿಸುತ್ತದೆ; ಪ್ರತಿಜನ್ಮದಲ್ಲೂ ವೈಷ್ಣವನಾಗಿಯೇ ಜನಿಸುವ ಮಹಾ ಭಾಗ್ಯವೂ ಲಭಿಸುತ್ತದೆ.

ಕೋದಂಡಸ್ಥೇ ಸವಿತರಿ ಪ್ರತ್ಯೂಷಃ ಪೂಜನಾದ್ಧರೇಃ ।
ಸಹಸ್ರಾಬ್ದಾರ್ಚನಫಲಂ ದಿನೇನೈಕೇನ ಲಭ್ಯತೇ ॥ –ಪಂಚರಾತ್ರ

ಧನುರ್ಮಾಸದಲ್ಲಿ ಮಾಡುವ ಉಷಃಕಾಲದ ಭಗವತ್ಪೂಜೆಯು ಸಾವಿರ ವರ್ಷಗಳ ಪೂಜಾಫಲವನ್ನು ಒಂದೇದಿನದಲ್ಲಿ ತಂದುಕೊಡುವುದು (ಇತರ

ದಿನಗಳಲ್ಲೂ ಸಕಾಲದಲ್ಲಿ ದೇವಪೂಜೆಯು ಅವಶ್ಯಕರ್ತವ್ಯ ಎಂಬುದನ್ನು ಮರೆಯಬಾರದು).

## ಧನುರ್ಮಾಸವನ್ನು ಆಚರಿಸದಿದ್ದಲ್ಲಿ ಮಹಾಪಾಪ

ಯಸ್ತು ದಾರಿದ್ರ್ಯಬುದ್ಧ್ಯಾ ಮುದ್ಗಾನ್ನಂ ನ ನಿವೇದಯೇತ್ ।
ವಿಷ್ಣವೇ ಕಾರ್ಮುಕೇ ಪ್ರಾತಃ ಸಪ್ತಜನ್ಮಸು ನಿರ್ಧನಃ ॥ – ಆಗ್ನೇಯಪುರಾಣ

ದಾರಿದ್ರ್ಯಬುದ್ಧಿಯಿಂದಾಗಿ ಯಾವನು ಮುದ್ಗಾನ್ನವನ್ನು ಧನುರ್ಮಾಸ ಪ್ರಾತಃ ಕಾಲದಲ್ಲಿ ಭಗವಂತನಿಗೆ ಅರ್ಪಿಸುವುದಿಲ್ಲವೋ, ಅವನು ಮುಂದಿನ ಏಳು ಜನ್ಮಗಳಲ್ಲಿ ದಾರಿದ್ರ್ಯಕ್ಕೆ ಗುರಿಯಾಗುವನು.

ಉಷಃಪೂಜಾಂ ಧನುರ್ಮಾಸೇ ಯೋ ನ ಕುರ್ವೀತ ವೈಷ್ಣವೀಮ್ ।
ಸಪ್ತಜನ್ಮಸು ರಿಕ್ತಃ ಸ್ಯಾತ್ ಕ್ಷಯರೋಗೀ ಚ ಮೂಢಧೀಃ ॥ –ಆಗ್ನೇಯಪುರಾಣ

ಧನುರ್ಮಾಸದಲ್ಲಿ ಪ್ರಾತಃಕಾಲದಲ್ಲಿ ಶ್ರೀಹರಿಯನ್ನು ಪೂಜಿಸದವನು ಮುಂದಿನ ಏಳುಜನ್ಮಗಳಲ್ಲಿ ದರಿದ್ರನೂ, ಕ್ಷಯರೋಗಿಯೂ, ಮಂದಬುದ್ಧಿಯವನೂ ಆಗುವನು.

## ಧನುರ್ಮಾಸದ ಕರ್ತವ್ಯ

ತಸ್ಮಾತ್ ಸರ್ವಪ್ರಯತ್ನೇನ ಚಾಪಮಾಸೇ ದಿನೇ ದಿನೇ ।
ಉಷಃಕಾಲೇ ತು ಸಂಪ್ರಾಪ್ತೇ ಅರ್ಚಯಿತ್ವಾ ಜನಾರ್ದನಮ್ ॥
ಉಪಚಾರೈಃ ಷೋಡಶೀಭಿರ್ಮುದ್ಗಾನ್ನಂ ಚ ನಿವೇದಯೇತ್ ।
ಯಥಾ ಸಂಕೋಚ್ಯ ಸತ್ಕರ್ಮ ಭುಂಕ್ತೇಽಲ್ಪದ್ವಾದಶೀದಿನೇ ।
ತಥಾ ಪ್ರಾತರ್ಧನುರ್ಮಾಸೇ ತ್ಯಕ್ತ್ವಾ ವ ಕರ್ಮಾಣ್ಯರ್ಚಯೇಚ್ಚ ಮಾಮ್॥
– ಜ್ಯೋತಿಃಶಾಸ್ತ್ರ(ಭಾಸ್ಕರೀಯ)

ಧನುರ್ಮಾಸದಲ್ಲಿ ಸರ್ವಪ್ರಯತ್ನದಿಂದಲೂ ಉಷಃಕಾಲದಲ್ಲೇ ಶ್ರೀಹರಿಯನ್ನು ಪೂಜಿಸಬೇಕು; ಮುದ್ಗಾನ್ನವನ್ನು ಸಮರ್ಪಿಸಬೇಕು. ಅಲ್ಪ(ಸಾಧನ) ದ್ವಾದಶೀ ಇದ್ದಾಗ ಉಳಿದೆಲ್ಲ ಕಾರ್ಯಗಳನ್ನೂ ಸಂಕೋಚಮಾಡಿ ಸಕಾಲದಲ್ಲೇ ಪಾರಣ ಮಾಡುವಂತೆ ಧನುರ್ಮಾಸದಲ್ಲೂ ಪ್ರತಿನಿತ್ಯ ಆಚರಿಸಬೇಕು. (ಧನುರ್ಮಾಸದ ದ್ವಾದಶಿಗಳನ್ನು – ಹರಿವಾಸರವಿಲ್ಲದಿದ್ದಾಗ – ಕಲಾಮಾತ್ರ ಸಾಧನೀದ್ವಾದಶಿಗಳಂತೆಯೇ ಆಚರಿಸಬೇಕು ಎಂಬುದು ಸಹ ಇದರಿಂದ ಸೂಚಿತವಾಗುವುದು).



## ಧನುರ್ಮಾಸ ಪೂಜಾಕಾಲ

ಮುಖ್ಯಾಽರುಣೋದಯೇ ಪೂಜಾ ಮಧ್ಯಮಾ ಲುಪ್ತತಾರಕಾ ।
ಅಧಮಾ ಸೂರ್ಯಸಹಿತಾ ಮಧ್ಯಾಹ್ನೇ ನಿಷ್ಫಲಾ ಭವೇತ್ ॥ – ಆಗ್ನೇಯಪುರಾಣ

ಅರುಣೋದಯಕಾಲದ ದೇವಪೂಜೆಯು ಉತ್ತಮ; ನಕ್ಷತ್ರಗಳು ಕಾಣೆಯಾದ ಅನಂತರದ ಪೂಜೆ ಮಧ್ಯಮ; ಸೂರ್ಯೋದಯಕಾಲದ ಪೂಜೆಯು ಅಧಮ; ಮಧ್ಯಾಹ್ನಪೂಜೆಯು ನಿರರ್ಥಕ.

ಧನುರ್ಮಾಸದಲ್ಲಿ ಬ್ರಹ್ಮಯಜ್ಞ, ಶ್ರಾದ್ಧಾದಿ ಪಿತೃಕಾರ್ಯಾದಿಗಳನ್ನೂ ಸಹ ಸೂರ್ಯೋದಯಕ್ಕಿಂತ ಮುಂಚಿತವಾಗಿಯೇ ಪೂರೈಸಬೇಕು.

## ಮುದ್ಗಾನ್ನದಲ್ಲಿ ಅಕ್ಕಿ – ಹೆಸರುಬೇಳೆಗಳ ಪ್ರಮಾಣ

ಮುದ್ಗಂ ತಂಡುಲಮಾನಂ ಸ್ಯಾದುತ್ತಮೋತ್ತಮಮುಚ್ಯತೇ ।
ಮಧ್ಯಮಂ ತಂಡುಲಾದರ್ಧಂ ತದರ್ಧಮಧಮಂ ಭವೇತ್ ॥
ಮುದ್ಗಂ ತು ದ್ವಿಗುಣಂ ಕೇಚಿತ್ ಪ್ರಶಂಸಂತಿ ಮುನೀಶ್ವರಾಃ ।
ಯಥಾಬಲಂ ಪ್ರಕುರ್ವೀತ ನ ಹೀಯೇತ್ತಂಡುಲಾರ್ಧತಃ ॥
– ಆಗ್ನೇಯಪುರಾಣ

ಅಕ್ಕಿಯಷ್ಟೇ ಪ್ರಮಾಣದಲ್ಲಿ ಹೆಸರುಬೇಳೆಯನ್ನು ಸೇರಿಸಿ ಮಾಡುವ ಹುಗ್ಗಿಯು ಉತ್ತಮೋತ್ತಮ. ಅಕ್ಕಿಯ ಪ್ರಮಾಣದ ಅರ್ಧದಷ್ಟು ಹೆಸರುಬೇಳೆ ಸೇರಿಸಿದರೆ ಮಧ್ಯಮ; ಅಕ್ಕಿಯ ಪ್ರಮಾಣಕ್ಕಿಂತ ಕಾಲುಭಾಗ ಹೆಸರುಬೇಳೆಯನ್ನು ಸೇರಿಸಿದರೆ ಅಧಮ; ಅಕ್ಕಿಯ ಎರಡರಷ್ಟು ಪ್ರಮಾಣದಲ್ಲಿ ಹೆಸರುಬೇಳೆಯನ್ನು ಸೇರಿಸುವುದು ಇನ್ನೂ ಶ್ರೇಷ್ಠ ಎಂದು ಕೆಲವು ಮುನಿಶ್ರೇಷ್ಠರ ಅಭಿಪ್ರಾಯ; ತನ್ನ ಶಕ್ತಿಯಿರುವಷ್ಟು ಶ್ರೇಷ್ಠರೀತಿಯಲ್ಲಿ ಹುಗ್ಗಿಯನ್ನು ತಯಾರಿಸಿ ನೈವೇದ್ಯ ಮಾಡಬೇಕು. ಎಂತಹ ಪ್ರಸಂಗದಲ್ಲೂ ಹೆಸರುಬೇಳೆಯ ಪ್ರಮಾಣವು ಅಕ್ಕಿಯ ಪ್ರಮಾಣದ ಅರ್ಧಕ್ಕಿಂತ ಕಡಿಮೆಯಾಗದಂತೆ ಎಚ್ಚರವಹಿಸಬೇಕು.

## ಮುದ್ಗಾನ್ನ ಸಮರ್ಪಣೆಯ ಫಲ

ದಧ್ಯಾರ್ದ್ರಕಂ ಚ ಮುದ್ಗಾನ್ನಂ ದದ್ಯಾಚ್ಚೈಲಾಗುಡೋಜ್ಜ್ವಲಮ್ ।
ಸುಸುಖೋಷ್ಣಂ ಸಕಂದಂ ಚ ವಿಷ್ಣವೇ ಯಃ ಸಮರ್ಪಯೇತ್ ॥
ದೃಷ್ಟ್ವಾ ತಚ್ಛುಭಮುದ್ಗಾನ್ನಂ ಸಂತುಷ್ಟೋ ಭಕ್ತವತ್ಸಲಃ ।
ದದಾತಿ ಸಕಲಾನ್ ಭೋಗಾನ್ ಮೋಕ್ಷಂ ಚ ಜಗದೀಶ್ವರಃ ॥
– ಪುರಾಣವಾಕ್ಯ(ಸ್ಮೃತಿಮುಕ್ತಾವಲಿಃ)

ಶಾಸ್ತ್ರೋಕ್ತವಿಧಿಯಲ್ಲಿ 'ಹುಗ್ಗಿ'ಯನ್ನು ತಯಾರಿಸಿ ಭಗವಂತನಿಗೆ ಸಮರ್ಪಿಸಿದರೆ, ಆತನು ಅನುಗ್ರಹಿಸಿ ಸಕಲಭೋಗಗಳನ್ನೂ, ಕೊನೆಯಲ್ಲಿ (ಜ್ಞಾನದ್ವಾರಾ)ಮೋಕ್ಷವನ್ನೂ ಕರುಣಿಸುವನು.

ಹಿಂದೊಮ್ಮೆ ಇಂದ್ರದೇವರು ರಾಜ್ಯಭ್ರಷ್ಟರಾದಾಗ ಶಚೀದೇವಿಯು ಹುಗ್ಗಿಯ ನೈವೇದ್ಯವನ್ನಿತ್ತು ಶ್ರೀಮಹಾಲಕ್ಷ್ಮಿಯನ್ನು ಈ ದ್ವಾದಶನಾಮಗಳಿಂದ ಸ್ತುತಿಸಿದರು. ಅದರ ಫಲವಾಗಿ ಇಂದ್ರದೇವರಿಗೆ ಪುನಃ ರಾಜ್ಯವು ದೊರೆತು ಸುಖಿಯಾದರು; ಆದ್ದರಿಂದ ಭಗವಂತನಿಗೆ ಹುಗ್ಗಿಯನ್ನು ಸಮರ್ಪಿಸಿದ ಮೇಲೆ ಈ ಲಕ್ಷ್ಮೀದ್ವಾದಶ-ನಾಮಸ್ತೋತ್ರವನ್ನು ಸಹ ಅವಶ್ಯ ಪಠಿಸಲೇಬೇಕು.

* * * *

### ಧನುರ್ಮಾಸದಲ್ಲಿ ಪಠಿಸಬೇಕಾದ ಶ್ರೀಲಕ್ಷ್ಮೀದ್ವಾದಶನಾಮಸ್ತೋತ್ರ

ಶ್ರೀದೇವೀ ಪ್ರಥಮಂ ನಾಮ ದ್ವಿತೀಯಮಮೃತೋದ್ಭವಾ ।
ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಸರ್ವಸುಂದರೀ ॥ ೧ ॥

ಪಂಚಮಂ ದೇವಗರ್ಭಾ ಚ ಷಷ್ಠಂ ಚ ಮಧುಸೂದನೀ ।
ಸಪ್ತಮಂ ತು ವರಾರೋಹಾ ಅಷ್ಟಮಂ ಹರಿವಲ್ಲಭಾ ॥ ೨ ॥

ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವದೇವತಾ ।
ಏಕಾದಶಂ ತು ಲಕ್ಷ್ಮೀಃ ಸ್ಯಾತ್ ದ್ವಾದಶಂ ತ್ವಿಂದಿರಾ ಭವೇತ್ ॥ ೩ ॥

ಏತದ್ದ್ವಾದಶ ನಾಮಾನಿ ತ್ರಿಸಂಧ್ಯಂಯಃ ಪಠೇನ್ನರಃ ।
ಆಯುರಾರೋಗ್ಯಮೈಶ್ವರ್ಯಮತಿಪುಣ್ಯಫಲಪ್ರದಮ್ ॥ ೪ ॥

ದ್ವಿಮಾಸಂ ಸರ್ವಕಾರ್ಯಾಣಿ ಷಣ್ಮಾಸಾದ್ರಾಜ್ಯಮೇವ ಚ ।
ಸಂವತ್ಸರಂ ತು ಪೂಜಾಯಾಃ ಶ್ರೀಲಕ್ಷ್ಮ್ಯಾ ಯಃ ಪೂಜ್ಯ ಏವ ಚ ॥ ೫ ॥

ಲಕ್ಷ್ಮೀಂ ಕ್ಷೀರಸಮುದ್ರರಾಜತನಯಾಂ ಶ್ರೀರಂಗಧಾಮೇಶ್ವರೀಂ
ದಾಸೀಭೂತಸಮಸ್ತದೇವವನಿತಾಂ ಲೋಕೈಕದೀಪಾಂಕುರಾಮ್ ।
ಶ್ರೀಮನ್ಮಂದಕಟಾಕ್ಷಲಬ್ಧವಿಭವಬ್ರಹ್ಮೇಂದ್ರಗಂಗಾಧರಾಂ
ತಾಂ ತ್ರೈಲೋಕ್ಯಕುಟುಂಬಿನೀಂ ಸರಸಿಜಾಂ ವಂದೇ ಮುಕುಂದಪ್ರಿಯಾಮ್ ।

– ಇತಿ ಯುಧಿಷ್ಠಿರಂ ಪ್ರತಿ ನಾರದವಚನಮ್(ಸ್ಮೃತಿಮುಕ್ತಾವಲಿಃ)



# ಧನುರ್ಮಾಸದ ವಿಶೇಷನಿಯಮಗಳು

೧. ಧನುರ್ಮಾಸದಲ್ಲಿ ಸೂರ್ಯೋದಯದ ಮುನ್ನವೇ ದೇವಪೂಜೆ, ಬ್ರಹ್ಮಯಜ್ಞ, ವೈಶ್ವದೇವ ಮೊದಲಾಗಿ ಮಾಧ್ಯಾಹ್ನಿಕಸಂಧ್ಯಾವಂದನೆಯವರೆಗೆ ಸಕಲಕಾರ್ಯಗಳನ್ನು ಪೂರೈಸಲೇ ಬೇಕು.

೨. ಪಿತೃಕಾರ್ಯವಿದ್ದಲ್ಲಿ ಅದನ್ನೂ ಸಹ ಸೂರ್ಯೋದಯದ ಮುನ್ನವೇ ಪೂರೈಸಬೇಕು.

೩. ಸೂರ್ಯೋದಯದ ಮುನ್ನ ತೀರ್ಥವನ್ನೂ ಸಹ ಸ್ವೀಕರಿಸಿ ಗಂಧಾಕ್ಷತೆಗಳನ್ನು ಧರಿಸಿ ಭೋಜನಕ್ಕೆ ಅಣಿಯಾಗಬೇಕು.

೪. ಸೂರ್ಯೋದಯವಾಗುತ್ತಿದ್ದಂತೆಯೇ ಆಪೋಶನ ಸ್ವೀಕರಿಸಬೇಕು. ಯಾವುದೇ ಸಮಯದಲ್ಲೂ ಸೂರ್ಯೋದಯದ ಮುನ್ನ ಆಪೋಶನ ಸ್ವೀಕರಿಸುವುದು ನಿಷಿದ್ಧ; ಧನುರ್ಮಾಸದಲ್ಲೂ ಸಹ. ಇದರಿಂದ ಕೆಲವರು ಸೂರ್ಯೋದಯದ ಮುನ್ನ ಮಾಡುವ ಭೋಜನ ನಿಷಿದ್ಧ ಎಂಬುದು ಸ್ಫುಟ ಪಡುತ್ತದೆ.

೫. ಧನುರ್ಮಾಸದ ದ್ವಾದಶಿಗಳನ್ನು ಕಲಾಮಾತ್ರಸಾಧನದ್ವಾದಶಿ-ಯಂತೆಯೇ ಆಚರಿಸಬೇಕು. ಹರಿವಾಸರವಿದ್ದಲ್ಲಿ ಮಾತ್ರ ಅದು ಕಳೆದ ನಂತರ ಪಾರಣೆ. ಪಂಚಾಂಗಗಳಲ್ಲಿ ಸಾಧನೀ ಎಂದು ಸೂಚಿಸದಿದ್ದರೂ ಕಲಾಮಾತ್ರ-ಸಾಧನೆಯಂತೆಯೇ ಧನುರ್ಮಾಸದ ದ್ವಾದಶಿಗಳನ್ನು ತಪ್ಪದೇ ಆಚರಿಸಬೇಕು.

೬. ಧನುರ್ಮಾಸದಲ್ಲಿ ಶ್ರಾದ್ಧ, ವೈಕುಂಠ ಮೊದಲಾಗಿ ಯಾವುದೇ ಪಿತೃಕಾರ್ಯವಿದ್ದರೂ ಅದನ್ನು ಸೂರ್ಯೋದಯದ ಮುನ್ನವೇ ಪೂರೈಸಿದಲ್ಲಿ ಮಾತ್ರವೇ ವಿಹಿತವೆನ್ನಿಸುವುದು. ಇಲ್ಲವಾದಲ್ಲಿ ಪ್ರತ್ಯವಾಯ ತಪ್ಪಿದ್ದಲ್ಲ.

೭. ಪ್ರತಿಮಾಸದಲ್ಲೂ ವೈಧೃತಿ,ವ್ಯತೀಪಾತಗಳು ವಿಶೇಷ; ಧನುರ್ಮಾಸ-ದಲ್ಲಂತೂ ಇವೆರಡಕ್ಕೆ ಇನ್ನೂ ವಿಶೇಷ. ಅವುಗಳ ಆಚರಣೆ ವಿಶೇಷವಾಗಿ ಪಿತೃದೇವತೆಗಳಿಗೆ ತುಷ್ಟಿಕರ; ಶಕ್ಯವಿದ್ದಲ್ಲಿ ಅಂದು ಸುವರ್ಣದಾನ ಪ್ರಶಸ್ತ.

೮. ಧನುರ್ಮಾಸದಲ್ಲಿ ಕ್ಷೌರ ನಿಷಿದ್ಧ.

೯. ಧನುರ್ಮಾಸದಲ್ಲಿ ಉಪನಯನ, ವಿವಾಹಗಳು ನಿಷಿದ್ಧ.

೧೦. ಧನುರ್ಮಾಸದ ಶುಕ್ಲಪಕ್ಷದ ದ್ವಾದಶೀ ಮುಕ್ಕೋಟಿದ್ವಾದಶೀ; ಅಂದು ತಿರುಪತಿಯಲ್ಲಿ ಸ್ವಾಮಿಪುಷ್ಕರಿಣಿಯಲ್ಲಿ ಅರುಣೋದಯಕಾಲದ ಸ್ನಾನ ಅತ್ಯಂತ ಪ್ರಶಸ್ತ.

# ಚಂದ್ರಗ್ರಹಣ

**ಪುಷ್ಯ ಪೂರ್ಣಿಮಾದಂದು (೩೧.೧೨.೦೯ರ ಗುರುವಾರ ಮಧ್ಯರಾತ್ರಿ)**

**ಕೇತುಗ್ರಸ್ತಚಂದ್ರಗ್ರಹಣ**

ಸ್ಪರ್ಶಕಾಲ: ರಾತ್ರಿ ೧೨.೨೩; ಮಧ್ಯಕಾಲ: ೧೨.೫೩; ಮೋಕ್ಷಕಾಲ: ೧.೨೩

ಒಟ್ಟು ಪರ್ವಕಾಲ — ೧ಘಂಟೆ

(ಆಯಾ ಊರಿನವರು ಪಂಚಾಂಗಗಳಿಂದಲೂ, ವೃತ್ತಪತ್ರಿಕೆಗಳಿಂದಲೂ ಸ್ಪರ್ಶಕಾಲ ಮೊದಲಾದವುಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು.)

**ವೇಧವಿಚಾರ:** ತಾ. ೩೧.೧೨.೦೯, ಗುರುವಾರ ಮಧ್ಯಾಹ್ನ ೧೨.೨೮ಕ್ಕೆ ವೇಧ ಪ್ರಾರಂಭ; ಗ್ರಹಣಸ್ಪರ್ಶಕಾಲಕ್ಕೆ ಸ್ಪರ್ಶಸ್ನಾನ; ಮೋಕ್ಷಾನಂತರ ಶುದ್ಧಸ್ನಾನ. ಮಾರನೆಯ ದಿನ (ಶುಕ್ರವಾರ) ಬೆಳಿಗ್ಗೆ ಸ್ನಾನ, ಪಾಕ, ಪೂಜೆ, ಭೋಜನ ಇತ್ಯಾದಿ.

**ಶುಭಫಲ –** ಸಿಂಹ, ಕನ್ಯಾ, ಮಕರ, ಮೇಷ ರಾಶಿಯವರಿಗೆ

**ಮಿಶ್ರಫಲ –** ತುಲಾ, ಧನು, ಕುಂಭ, ವೃಷಭ ರಾಶಿಯವರಿಗೆ

**ಅಶುಭಫಲ –** ಮಿಥುನ, ಕರ್ಕ, ವೃಶ್ಚಿಕ, ಮೀನ ರಾಶಿಯವರಿಗೆ

**ವಿಶೇಷ ಅಶುಭ –** ಆರ್ದ್ರಾನಕ್ಷತ್ರ, ಮಿಥುನರಾಶಿ

**ವಿ.ಸೂ: ಅಶುಭಫಲವಿರುವವರು ಚಂದ್ರಗ್ರಹಣದ ಅನಿಷ್ಟಪರಿಹಾರಕ್ಕಾಗಿ ಈ ಕೆಳಗಿನ ಶ್ಲೋಕಗಳನ್ನು ಬರೆದು, ಗ್ರಹಣಕಾಲದಲ್ಲಿ ತಮ್ಮಲ್ಲಿಟ್ಟುಕೊಂಡಿದ್ದು ನಂತರ ದಕ್ಷಿಣೆಸಮೇತ ದಾನ ಮಾಡಬೇಕು:**

**ಯೋಽಸೌ ವಜ್ರಧರೋ ದೇವಃ ಆದಿತ್ಯಾನಾಂ ಪ್ರಭುರ್ಮತಃ।**
**ಚಂದ್ರಗ್ರಹೋಪರಾಗೋತ್ಥಗ್ರಹಪೀಡಾಂ ವ್ಯಪೋಹತು॥**

**ಯೋಽಸೌ ದಂಡಧರೋ ದೇವಃ ಯಮೋ ಮಹಿಷವಾಹನಃ।**
**ಚಂದ್ರಗ್ರಹೋಪರಾಗೋತ್ಥಗ್ರಹಪೀಡಾಂ ವ್ಯಪೋಹತು॥**

**ಯೋಽಸೌ ಶೂಲಧರೋ ದೇವಃ ಪಿನಾಕೀ ವೃಷವಾಹನಃ।**
**ಚಂದ್ರಗ್ರಹೋಪರಾಗೋತ್ಥಗ್ರಹಪೀಡಾಂ ವ್ಯಪೋಹತು॥**

****



# ಸೂರ್ಯಗ್ರಹಣ

**ಪುಷ್ಯ ಅಮಾವಾಸ್ಯೆಯಂದು (೧೫.೦೧.೧೦, ಶುಕ್ರವಾರ)**

**ರಾಹುಗ್ರಸ್ತಸೂರ್ಯಗ್ರಹಣ**

ಸ್ಪರ್ಶಕಾಲ: ಮಧ್ಯಾಹ್ನ೧೧.೧೯; ಮಧ್ಯಕಾಲ: ೧.೧೪; ಮೋಕ್ಷಕಾಲ: ೩.೧೦

ಒಟ್ಟು ಪರ್ವಕಾಲ — ೩ ಘಂಟೆ ೫೧ ನಿಮಿಷಗಳು

(ಆಯಾ ಊರಿನವರು ಪಂಚಾಂಗಗಳಿಂದಲೂ, ವೃತ್ತಪತ್ರಿಕೆಗಳಿಂದಲೂ ಸ್ಪರ್ಶಕಾಲ ಮೊದಲಾದವುಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು.)

**ವೇಧವಿಚಾರ:** ತಾ. ೧೪.೦೧.೧೦ ಗುರುವಾರ ರಾತ್ರಿ ೯.೩೦ಕ್ಕೆ ವೇಧ ಪ್ರಾರಂಭ. ಆದ್ದರಿಂದ ಗುರುವಾರ ರಾತ್ರಿ ೯.೩೦ರಿಂದ ಮಾರನೆಯ ದಿನ ಗ್ರಹಣ ಮುಕ್ತಾಯವಾಗುವವರೆಗೂ ಭೋಜನ ನಿಷಿದ್ಧ. ಗ್ರಹಣಸ್ಪರ್ಶಕಾಲಕ್ಕೆ ಸ್ಪರ್ಶಸ್ನಾನ; ಮೋಕ್ಷಾನಂತರ ಶುದ್ಧಸ್ನಾನ, ಪಾಕ, ಪೂಜೆ, ಭೋಜನ ಇತ್ಯಾದಿ.

**ಶುಭಫಲ –** ಮೇಷ, ಸಿಂಹ, ವೃಶ್ಚಿಕ, ಮೀನ ರಾಶಿಯವರಿಗೆ

**ಮಿಶ್ರಫಲ –** ವೃಷಭ, ಕರ್ಕ, ಕನ್ಯಾ, ಧನು ರಾಶಿಯವರಿಗೆ

**ಅಶುಭಫಲ –** ಮಿಥುನ, ತುಲಾ, ಮಕರ, ಕುಂಭ ರಾಶಿಯವರಿಗೆ

**ವಿಶೇಷ ಅಶುಭ –** ಉತ್ತರಾಷಾಢನಕ್ಷತ್ರ, ಮಕರರಾಶಿ

**ವಿ.ಸೂ: ಅಶುಭಫಲವಿರುವವರು ಸೂರ್ಯಗ್ರಹಣದ ಅನಿಷ್ಟಪರಿಹಾರಕ್ಕಾಗಿ ಈ ಕೆಳಗಿನ ಶ್ಲೋಕಗಳನ್ನು ಬರೆದು, ಗ್ರಹಣಕಾಲದಲ್ಲಿ ತಮ್ಮಲ್ಲಿಟ್ಟುಕೊಂಡಿದ್ದು ನಂತರ ದಕ್ಷಿಣೆಸಮೇತ ದಾನ ಮಾಡಬೇಕು:**

**ಯೋಽಸೌ ವಜ್ರಧರೋ ದೇವಃ ಆದಿತ್ಯಾನಾಂ ಪ್ರಭುರ್ಮತಃ।**
**ಸೂರ್ಯಗ್ರಹೋಪರಾಗೋತ್ಥಗ್ರಹಪೀಡಾಂ ವ್ಯಪೋಹತು॥**

**ಯೋಽಸೌ ದಂಡಧರೋ ದೇವಃ ಯಮೋ ಮಹಿಷವಾಹನಃ।**
**ಸೂರ್ಯಗ್ರಹೋಪರಾಗೋತ್ಥಗ್ರಹಪೀಡಾಂ ವ್ಯಪೋಹತು॥**

**ಯೋಽಸೌ ಶೂಲಧರೋ ದೇವಃ ಪಿನಾಕೀ ವೃಷವಾಹನಃ।**
**ಸೂರ್ಯಗ್ರಹೋಪರಾಗೋತ್ಥಗ್ರಹಪೀಡಾಂ ವ್ಯಪೋಹತು॥**

****

ವಿ.ಸೂ: ಅನಿಷ್ಟಪರಿಹಾರಕ್ಕೆ ಮುಖ್ಯವಾಗಿ ಗ್ರಹಣಕಾಲದಲ್ಲಿ ವಿಷ್ಣುಸಹಸ್ರನಾಮ, ವಾಯುಸ್ತುತಿ, ದ್ವಾದಶಸ್ತೋತ್ರಗಳ ಪಠಣ ಕರ್ತವ್ಯ; ಸ್ತ್ರೀಯರಿಗೆ ಕೇಶವನಾಮ, ಮಧ್ವನಾಮ, ಹರಿಕಥಾಮೃತಸಾರ ಮೊದಲಾದವುಗಳ ಪಠಣ ವಿಹಿತ; ಯಥಾಶಕ್ತಿ ಸುವರ್ಣ, ರಜತ, ಮುತ್ತು ಮೊದಲಾದವುಗಳ ದಾನವೂ ವಿಹಿತ.

ಸೂರ್ಯಗ್ರಹಣಪರ್ವಕಾಲದಲ್ಲೊಮ್ಮೆ ಶ್ರೀಕೃಷ್ಣ ಲೋಕಶಿಕ್ಷಣಕ್ಕೆಂದು ಕುರುಕ್ಷೇತ್ರದಲ್ಲಿ ಸ್ನಾನಕ್ಕೆ ತೆರಳಿದ್ದ ವಿವರ ಮಹಾಭಾರತತಾತ್ಪರ್ಯನಿರ್ಣಯದಲ್ಲಿದೆ. ಶ್ರೀಮದಾಚಾರ್ಯರು ಸೂರ್ಯಗ್ರಹಣಕಾಲದಲ್ಲಿ ಕಣ್ವತೀರ್ಥದಲ್ಲಿ ಮಿಂದು ಸಮುದ್ರಸ್ನಾನವನ್ನು ಮಾಡಿದ ವಿವರ ಸುಮಧ್ವವಿಜಯದಲ್ಲಿದೆ. ಇವುಗಳ ಸ್ಮರಣೆಯೂ ಫಲಾಧಿಕ್ಯಕ್ಕೆ ಸಾಧನ.

### ಶ್ರೀನರಹರಿತೀರ್ಥರ ಹಿರಿಮೆ (ಆರಾಧನೆ: ೦೭.೧೧.೨೦೧೦)

ಶ್ರೀನರಹರಿತೀರ್ಥರಿಗೆ ಸಂಬಂಧಿಸಿದ ಸಂಖ್ಯೆ ದೊರೆಯುವ ಮೊದಲ ಶಾಸನದ ಕಾಲ ಕ್ರಿ. ಶ. ೧೨೬೪. ಕೊನೆಯ ಶಾಸನ ಕಾಲ ಕ್ರಿ. ಶ. ೧೨೯೪ ಎಂದರೆ ಒಟ್ಟು ೩೦ ವರ್ಷದಷ್ಟು ದೀರ್ಘ ಕಾಲದ ಅವಧಿ ಇವರ ಶಾಸನಗಳದ್ದು. ಇದು ಶ್ರೀನರಹರಿತೀರ್ಥರ ಪ್ರಭಾವ ಕಳಿಂಗ ದೇಶದಲ್ಲಿ ಇದು ಎಷ್ಟು ಅಪಾರವಾಗಿತ್ತು ಎಂಬುದಕ್ಕೆ ದ್ಯೋತಕ. ಈ ಶಾಸನಗಳಿಂದಾಗಿ ಶ್ರೀಮಧ್ವಾಚಾರ್ಯರ ಕಾಲನಿರ್ಣಯ(೧೨೦೦-೧೨೮೦) ಶಕ್ಯವಾಗಿದೆ.

ಶ್ರೀಕೂರ್ಮಮ್ ಶಿಲಾಶಾಸನವು ಇವರ ಶಾಸನಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಅದರಲ್ಲಿ ಬಂದಿರುವ ಉಲ್ಲೇಖದಂತೆ ಶ್ರೀನರಹರಿತೀರ್ಥರು ಕಳಿಂಗ ದೇಶವನ್ನು ಅತ್ಯಂತ ಸಮರ್ಥವಾಗಿ ಪಾಲಿಸಿದ್ದಲ್ಲದೆ ಆಗೊಮ್ಮೆ ನಡೆದ ಯುದ್ಧದಲ್ಲಿ ಸಹ ಪಾಲ್ಗೊಂಡು ಜಯ ಸಾಧಿಸಿದ್ದರು ಎಂಬ ಅಪೂರ್ವಮಾಹಿತಿ ದೊರೆಯುತ್ತದೆ.

ಒಬ್ಬ ವೈಷ್ಣವಯತಿಯಾಗಿ ರಾಜ್ಯಭಾರ ಮಾಡಿದ ಏಕಮಾತ್ರ ಉಲ್ಲೇಖ ಶ್ರೀನರಹರಿತೀರ್ಥರದು ಎಂಬುದು ಉಲ್ಲೇಖ. ಇತರ ಪಂಥದ ಯಾವ ಯತಿಯೂ ಸಹ ಹೀಗೆ ರಾಜ್ಯಭಾರ ಮಾಡಿದ ಉಲ್ಲೇಖ ಕಂಡು ಬರುವುದಿಲ್ಲ ಎಂಬ ಸಹ ಗಮನಾರ್ಹ.

ಹೀಗೆ ತಮ್ಮ ಯತಿಶಿಷ್ಯರನ್ನು ರಾಜ್ಯಭಾರಕ್ಕೆ ತೊಡಗಿಸುವ ಮೂಲಕ ಶ್ರೀಮನ್ಮಧ್ವಾಚಾರ್ಯರು ತೋರಿದ ಸಮಾಜಮುಖಿಚಿಂತನೆ ಅತ್ಯಂತ ಅಪೂರ್ವ- ವಾದದ್ದು. ವಿಪ್ರೋಽಪಿ ಯುದ್ಧ್ಯೇತ ಮಹಾಪ್ರಭಾವಃ ಎಂಬ ಮಹಾಭಾರತದ ವಾಕ್ಯಕ್ಕೆ ಅತ್ಯುತ್ತಮ ನಿದರ್ಶನ.



# ಗ್ರಹಣಕಾಲದ ವಿಶೇಷ ನಿಯಮಗಳು

ಲೇಖಕರು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

೧. ಗ್ರಹಣದ ಅನುಷ್ಠಾನವು ಸಕಲವರ್ಣದವರಿಗೂ, ಸಕಲ ಆಶ್ರಮದವರಿಗೂ, ಸ್ತ್ರೀಪುರುಷರಿಗೂ ಕಡ್ಡಾಯ.

೨. ಗ್ರಹಣ ಹಿಡಿಯುತ್ತಲೇ ಒಮ್ಮೆ ಗ್ರಹಣ ಬಿಟ್ಟಕೂಡಲೆ ಮತ್ತೆ ಹೀಗೆ ಎರಡು ಸ್ನಾನಗಳನ್ನು ಪ್ರತಿಯೊಬ್ಬರೂ ಮಾಡಲೇ ಬೇಕು.

೩. ಹಿಡಿದಾಗ ಸ್ನಾನಮಾಡದಿದ್ದಲ್ಲಿ ಅಪಮೃತ್ಯುವಿನ ಭಯ, ಮಾಡಿದವರಿಗೆ ಅಪಮೃತ್ಯು ಪರಿಹಾರ.

೪. ಗ್ರಹಣ ಬಿಟ್ಟ ಬಳಿಕ ಸ್ನಾನ ಮಾಡದಿದ್ದಲ್ಲಿ ಅವರಿಗೆ ಇನ್ನೊಮ್ಮೆ ಅಂತಹ ಗ್ರಹಣವೊದಗಿ ಸ್ನಾನಾದಿಗಳನ್ನು ಮಾಡುವವರೆಗೂ ಸೂತಕವಿದ್ದಂತೆ.

೫. ಸೂತಕವಿದ್ದವರಿಗೂ ಗ್ರಹಣದ ಸ್ನಾನ ವಿಹಿತ. ಗ್ರಹಣಕಾಲದಲ್ಲಿ ಅವರಿಗೆ ತಾತ್ಕಾಲಿಕ ಶುದ್ಧಿ ಲಭಿಸಿರುತ್ತದೆ. ರಜಸ್ವಲೆಯರಿಗೂ ಗ್ರಹಣದ ಸ್ನಾನಗಳು ವಿಹಿತ.

೬. ಗ್ರಹಣ ಹಿಡಿಯುತ್ತಲೇ ಉಟ್ಟ ಬಟ್ಟೆಯಲ್ಲೇ ಸ್ನಾನ ಮಾಡಬೇಕಾದ್ದು ವಿಶೇಷ.

೭. ಗ್ರಹಣಕಾಲದಲ್ಲಿ ಶ್ರಾದ್ಧ ತರ್ಪಣಗಳು ವಿಹಿತ.

೮. ಗ್ರಹಣದ ಪ್ರಥಮಭಾಗವು ದೇವತೆಗಳಿಗೂ, ಅನಂತರದ ಭಾಗ ಪಿತೃಗಳಿಗೂ, ಮಧ್ಯಕಾಲ ಮನುಷ್ಯರಿಗೂ, ಮೋಕ್ಷಕಾಲ ರಾಕ್ಷಸರಿಗೂ ಪ್ರಿಯಕರ. ದೇವಕಾರ್ಯಾದಿಗಳನ್ನು ಅವರಿಗೆ ಪ್ರಿಯವಾದ ಕಾಲಗಳಲ್ಲೇ ಮಾಡಬೇಕು.

೯. ಗ್ರಹಣಕಾಲದಲ್ಲಿ ಸುವರ್ಣ, ಗೋ, ಭೂಮಿ, ಧಾನ್ಯ ಮೊದಲಾದವುಗಳ ದಾನ ವಿಶೇಷ ಕರ್ತವ್ಯ.

೧೦. ಹಾಲು, ಮೊಸರು ಮೊದಲಾದ ಪದಾರ್ಥಗಳಿಗೆ ಗ್ರಹಣದ ದೋಷವಿಲ್ಲ. ಅವುಗಳ ಮೇಲೆ ದರ್ಭೆಹಾಕಿಟ್ಟಿದ್ದಲ್ಲಿ ಅವುಗಳು ಗ್ರಾಹ್ಯವೆನಿಸುವವು. ಆದರೆ ಬೇಯಿಸಿದ ಪದಾರ್ಥಗಳ ಮೇಲೆ ದರ್ಭೆ ಹಾಕಿದರೂ ಅವು ಅಗ್ರಾಹ್ಯ.

೧೧. ಗ್ರಹಣಕಾಲದಲ್ಲಿ ಯಾವುದೇ ಆಹಾರವನ್ನು ಸರ್ವಥಾ ಸ್ವೀಕರಿಸ-ಕೂಡದು. ಆಕಸ್ಮಾತ್ತಾಗಿ ಆ ಕಾಲದಲ್ಲಿ ಆಹಾರ ಸ್ವೀಕರಿಸಿದಲ್ಲಿ ಮೂರು ದಿನಗಳ ಉಪವಾಸವನ್ನು ಮಾಡಿ ಆ ದೋಷವನ್ನು ಪರಿಹರಿಸಿಕೊಳ್ಳಬೇಕು.

೧೨. ಗ್ರಹಣದ ಹಿಂದಿನ ಹಾಗು ಮುಂದಿನ ಕೆಲವು ದಿನಗಳು ವಿಶೇಷ ಶುಭಕಾರ್ಯಗಳಿಗೆ ವರ್ಜ್ಯ.

೧೩. ಗ್ರಹಣಕಾಲದಲ್ಲಿ ನಿದ್ರಿಸಿದರೆ ರೋಗ; ಮೂತ್ರವಿಸರ್ಜನೆಯಿಂದ ದಾರಿದ್ರ್ಯ; ಮಲವಿಸರ್ಜನೆಯಿಂದ ಕ್ರಿಮಿಯಾಗಿ ಜನ್ಮ; ಮೈಥುನದಿಂದ ಊರಹಂದಿಯ ಜನ್ಮ. ಅಭ್ಯಂಜನ ಸ್ನಾನದಿಂದ ಕುಷ್ಠರೋಗ; ಭೋಜನದಿಂದ ಅಧೋಗತಿ. ಆದ್ದರಿಂದ ನಿದ್ರೆ, ಮಲಮೂತ್ರವಿಸರ್ಜನ, ಮೈಥುನ, ಭೋಜನ ಮೊದಲಾದವುಗಳನ್ನು ಗ್ರಹಣಕಾಲದಲ್ಲಿ ಸರ್ವಥಾ ಮಾಡಕೂಡದು.

೧೪. ನದೀ, ಸರೋವರ, ಸಮುದ್ರಾದಿಗಳ ಸ್ನಾನ ಗ್ರಹಣಕಾಲದಲ್ಲಿ ತುಂಬಾ ಪುಣ್ಯಕರ; ಚಂದ್ರಗ್ರಹಣಕ್ಕೆ ಗೋದಾವರೀ ಸ್ನಾನವೂ, ಸೂರ್ಯಗ್ರಹಣಕ್ಕೆ ನರ್ಮದಾ ಸ್ನಾನವೂ ವಿಶೇಷ ಪುಣ್ಯಕರ.

೧೫. ಆಷಾಢ ಮಾಸದ ಗ್ರಹಣದಲ್ಲಿ ತಾಪಾ ನದಿಯ ಸ್ನಾನವು, ಶ್ರಾವಣಮಾಸದ ಗ್ರಹಣದಲ್ಲಿ ಸಿಂಧುನದಿಯ ಸ್ನಾನವು ಹೆಚ್ಚು ಪ್ರಶಸ್ತ.

೧೬. ಗ್ರಹಣಕಾಲದಲ್ಲಿ ಜಪ, ಮಂತ್ರಪಠನೆ, ಶ್ರೀಮದ್ಭಾಗವತ ಸರ್ವ-ಮೂಲಾದಿಗಳ ಪಾರಾಯಣ ಮೊದಲಾದವುಗಳು ವಿಶೇಷ ಪುಣ್ಯಕರ. ಮಂತ್ರಗಳ ಉಪದೇಶ ಸ್ವೀಕಾರಕ್ಕೂ ಈ ಕಾಲವು ವಿಶೇಷ.

### ಗ್ರಹಣದೋಷಪರಿಹಾರಕ್ಕೆಂದು ಪಠಿಸಬೇಕಾದ ವಿಶೇಷಶ್ಲೋಕಗಳು

ಪ್ರಾಣರೂಪೋ ಹಿ ಲೋಕಾನಾಂ ಸದಾ ಕೃಷ್ಣಮೃಗಪ್ರಿಯಃ।
ವಾಯುಃ ಸೂರ್ಯೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು॥

ಯೋಽಸಾವಿಂದುಧರೋ ದೇವಃ ಪಿನಾಕೀ ವೃಷವಾಹನಃ।
ಸೂರ್ಯೋಪರಾಗಪಾಪಾನಿ ಸ ನಾಶಯತು ಶಂಕರಃ॥

ತ್ರೈಲೋಕ್ಯೇ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ।
ಬ್ರಹ್ಮ ವಿಷ್ಣ್ವರ್ಕರುದ್ರಾಶ್ಚ ದಹಂತು ಮಮ ಪಾತಕಮ್॥

* * * *



## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

**ಈ ವರ್ಷ ನಮ್ಮ ಪ್ರತಿಷ್ಠಾನದಿಂದ ಪ್ರಕಾಶನಗೊಳ್ಳಲಿರುವ ಕೃತಿಗಳು:**

೧) **ಶ್ರೀಹರಿಕಥಾಮೃತಸಾರ** -
ಶ್ರೀಕಮಲಾಪತಿದಾಸರ ವ್ಯಾಖ್ಯಾನದೊಂದಿಗೆ (ಶ್ರೀಜಗನ್ನಾಥದಾಸರ ದ್ವಿಶತಮಾನೋತ್ಸವದ ಸ್ಮಾರಕ ಪ್ರಕಾಶನ)

೨) **ಸರ್ವಮೂಲಸೌರಭ**
(ಸರ್ವಮೂಲಗ್ರಂಥಗಳ ಪರಿಚಯಾತ್ಮಕವಾದ ಕೃತಿ)

೩) **ಯತಿಧರ್ಮಪ್ರದೀಪ**
(ಅನೇಕ ಆಕರಗ್ರಂಥಗಳಿಂದ ಸನ್ಯಾಸದ ವಿಧಿವಿಧಾನ, ಯತಿಗಳ ನಿತ್ಯಾಹ್ನಿಕ, ವಿಶೇಷಕರ್ತವ್ಯ, ಚಾತುರ್ಮಾಸ್ಯವಿಧಿ ಮೊದಲಾದ ವಿವರಗಳ ಸಂಕಲನ)

೪) **ಸಂಗ್ರಹರಾಮಾಯಣ**
(ಶ್ರೀನಾರಾಯಣಪಂಡಿತರ ಸಮಗ್ರಕೃತಿ - ಸಂಸ್ಕೃತ ಮೂಲ ಹಾಗೂ ವಿವರಣಾತ್ಮಕ ಟಿಪ್ಪಣಿಗಳೊಂದಿಗೆ)

೫) **ಬಳಿತ್ಥಾಸೂಕ್ತ**
(ಶ್ರೀರಾಮ, ಕೃಷ್ಣ, ವೇದವ್ಯಾಸಪರ ಹಾಗೂ ಹನುಮದ್ಭೀಮ ಮಧ್ವಪರವಾದ ವಿಶೇಷಾರ್ಥಗಳುಳ್ಳ ಕನ್ನಡಾನುವಾದ ಸಮೇತ- ಚತುರ್ಥಾವೃತ್ತಿ)

೬) **ಮಧ್ವಭಾರತ**
(ಸಮಗ್ರ ಮಹಾಭಾರತತಾತ್ಪರ್ಯನಿರ್ಣಯದ ಕನ್ನಡ ಸಾರ)

೭) **ಶ್ರೀವಾದಿರಾಜಕೃತಿಮಂಜರೀ**
(ಶ್ರೀವಾದಿರಾಜರ ಜೀವನ, ಕೃತಿಗಳ ಪರಿಚಯ)

೮) **ಪಾಜಕದ ಗಂಟೆ**
(ಶ್ರೀ ಸು.ರಂ.ಎಕ್ಕುಂಡಿ ಅವರ ಕೃತಿ)

೯) **ಶ್ರೀ ವಿಜಯದಾಸರು ಮತ್ತು ಅವರ ಕೃತಿಗಳು**

*****

# ಮಾಸದ ವಿಶೇಷಗಳು

## ಮಾರ್ಗಶೀರ್ಷಮಾಸ ಕೃಷ್ಣಪಕ್ಷ (ಮಾಸನಿಯಾಮಕ: ಶ್ರೀ-ಕೇಶವ)

೧೨.೧೨.೦೯: **ಸರ್ವರಿಗೂ ಏಕಾದಶೀ**
೧೫.೧೨.೦೯: ಕೃಷ್ಣಾಂಗಾರಚತುರ್ದಶೀ (ಸುವರ್ಣಾನದೀಸ್ನಾನ)
೧೬.೧೨.೦೯: ದರ್ಶ, ಧನುಃಸಂಕ್ರಮಣ, ವಿಷ್ಣುಪಂಚಕವ್ರತ

## ಪುಷ್ಯಮಾಸ-ಶುಕ್ಲಪಕ್ಷ (ಮಾಸನಿಯಾಮಕ: ಲಕ್ಷ್ಮೀ-ನಾರಾಯಣ)

೧೮.೧೨.೦೯: ಧನುರ್ಮಾಸಾರಂಭ, ಚಂದ್ರದರ್ಶನ
೨೦.೧೨.೦೯: ವಿಷ್ಣುಪಂಚಕವ್ರತ
೨೨.೧೨.೦೯: ಉತ್ತರಾಯಣ ಪ್ರಾರಂಭ
೨೮.೧೨.೦೯: **ಸರ್ವರಿಗೂಏಕಾದಶೀ(ಪುತ್ರದಾ), ವೈಕುಂಠ ಏಕಾದಶೀ**
೨೯.೧೨.೦೯: **ಮುಕ್ಕೋಟಿದ್ವಾದಶೀ (ಕಲಾಮಾತ್ರಸಾಧನೀ)**
೩೧.೧೨.೦೯: **ಚಂದ್ರಗ್ರಹಣ**, ವಿಷ್ಣುಪಂಚಕವ್ರತ, ಮಾಘಸ್ನಾನಾರಂಭ
**(ವಿ.ಸೂ:ಚಂದ್ರಗ್ರಹಣದ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ)**

## ಪುಷ್ಯಮಾಸ-ಕೃಷ್ಣಪಕ್ಷ(ಮಾಸನಿಯಾಮಕ: ಲಕ್ಷ್ಮೀ-ನಾರಾಯಣ)

೧೧.೦೧.೧೦: **ಸರ್ವರಿಗೂ ಏಕಾದಶೀ (ಷಟ್ತಿಲಾ)**
೧೩.೦೧.೧೦: ಧನುರ್ಮಾಸಸಮಾಪ್ತಿ, ಭೋಗೀ
೧೪.೦೧.೧೦: ದರ್ಶ, ಮಕರಸಂಕ್ರಮಣ
(ಪುಣ್ಯಕಾಲ ಸಂಜೆ ೫.೪೯ರ ನಂತರ)
೧೫.೦೧.೧೦: **ಸೂರ್ಯಗ್ರಹಣ**, ವಿಷ್ಣುಪಂಚಕ
**(ವಿ.ಸೂ:ಸೂರ್ಯಗ್ರಹಣದ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ)**

## ಮಾಘಮಾಸ-ಶುಕ್ಲಪಕ್ಷ(ಮಾಸನಿಯಾಮಕ: ಕಮಲಾ-ಮಾಧವ)

೧೬/೧೭.೦೧.೧೦: ವಿಷ್ಣುಪಂಚಕ ವ್ರತ ಇರುವುದಿಲ್ಲ
೨೦.೦೧.೧೦: ವಸಂತಪಂಚಮೀ
೨೨.೦೧.೧೦: ರಥಸಪ್ತಮೀ (ಅರ್ಕಪತ್ರಸ್ನಾನ ಹಾಗೂ ಯಮತರ್ಪಣ)



೨೩.೦೧.೧೦: ಭೀಷ್ಮಾಷ್ಟಮೀ (ಭೀಷ್ಮತರ್ಪಣ)
೨೪.೦೧.೧೦: **ಶ್ರೀಮಧ್ವನವಮೀ**
೨೬.೦೧.೧೦: **ಸರ್ವರಿಗೂ ಏಕಾದಶೀ (ಜಯಾ)**
೨೭.೦೧.೧೦: ಭೀಮದ್ವಾದಶೀ
೩೦.೦೧.೧೦: ವ್ಯಾಸಪೂಜೆ, ಮಾಘಸ್ನಾನಸಮಾಪ್ತಿ, ವಿಷ್ಣುಪಂಚಕವ್ರತ

## ಗುರುಗಳ ಪುಣ್ಯದಿನಗಳು

೧೪.೧೨.೦೯: ಶ್ರೀದಯಾನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
೧೬.೧೨.೦೯: ಶ್ರೀಜಿತಾಮಿತ್ರತೀರ್ಥರು (ರಾ.ಮ.), ಕೃಷ್ಣಾನಡುಗಡ್ಡೆ
೧೮.೧೨.೦೯: ಶ್ರೀಜಗನ್ನಾಥತೀರ್ಥರು (ವ್ಯಾ.ಮ.), ಕುಂಭಘೋಣ
ಶ್ರೀಸುಯಮೀಂದ್ರತೀರ್ಥರು (ರಾ.ಮ.)
೨೦.೧೨.೦೯: ಶ್ರೀಶ್ರೀನಾಥತೀರ್ಥರು (ವ್ಯಾ.ಮ.), ತಿರುಮಕೂಡಲು
೨೧.೧೨.೦೯: ಶ್ರೀಲಕ್ಷ್ಮೀವಲ್ಲಭತೀರ್ಥರು (ವ್ಯಾ.ಮ.), ಬೇಲೂರು
೨೭.೧೨.೦೯: ಶ್ರೀಆದಿರಾಜತೀರ್ಥರು (ಶ್ರೀಪಾ.ಮ.), ಶ್ರೀರಂಗ
ಶ್ರೀಗುಣಸಾರನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
ಶ್ರೀಯಶೋನಿಧಿತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
೨೮.೧೨.೦೯: ಶ್ರೀರಘೂತ್ತಮತೀರ್ಥರು (ಉ.ಮ.), ತಿರುಕ್ಕೋಯಿಲೂರು
೩೧.೧೨.೦೯: ಶ್ರೀಲಕ್ಷ್ಮೀಮನೋಹರತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
೦೬.೦೧.೧೦: ಶ್ರೀಸತ್ಯಕಾಮತೀರ್ಥರು (ಉ.ಮ.), ಆತಕೂರ್
೦೭.೦೧.೧೦: ಶ್ರೀನರಹರಿತೀರ್ಥರು, ಹಂಪೆ
೦೮.೦೧.೧೦: ಶ್ರೀಸತ್ಯಾಭಿಜ್ಞತೀರ್ಥರು (ಉ.ಮ.), ರಾಣೆಬೆನ್ನೂರು
ಶ್ರೀಗೋಪಾಲದಾಸರ ಪುಣ್ಯದಿನ, ಉತ್ತನೂರು
೧೪.೦೧.೧೦: ಶ್ರೀವಿದ್ಯಾಧೀಶತೀರ್ಥರು (ಉ.ಮ.), ಏಕಚಕ್ರನಗರ
೧೫.೦೧.೧೦: ಶ್ರೀಪುರಂದರದಾಸರ ಪುಣ್ಯದಿನ
೧೭.೦೧.೧೦: ಶ್ರೀಸಂಕರ್ಷಣತೀರ್ಥರು (ಶ್ರೀಪಾ.ಮ.), ಶ್ರೀನಗರ
೨೦.೦೧.೧೦: ಶ್ರೀಶ್ರೀವಲ್ಲಭತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
೨೬.೦೧.೧೦: ಶ್ರೀಸತ್ಯಜ್ಞಾನತೀರ್ಥರು (ಉ.ಮ.), ರಾಜಮಹೇಂದ್ರಿ
೩೦.೦೧.೧೦: ಶ್ರೀಜ್ಞಾನನಿಧಿತೀರ್ಥರು (ಶ್ರೀಪಾ.ಮ.), ಶ್ರೀರಂಗಪಟ್ಟಣ

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೧೩-೧೨-೦೯, ಮಧ್ಯಾಹ್ನ ೨.೪೫ ಘಂಟೆಗೆ ವಿಚಾರಸಂಕಿರಣ

ವಿಷಯ: **ಮಾಧ್ವಪರಂಪರೆಯ ಯತಿಶೇಖರರು**

ಸ್ಥಳ: ವಿಜಯಭಾರತಿ ಪ್ರೌಢಶಾಲೆ, ಗಿರಿನಗರ, ಬೆಂಗಳೂರು

೨೯-೧೨-೦೯ ರಿಂದ ೪.೧.೧೦ರವರೆಗೆ ಸಂಜೆ ೬.೩೦ ಘಂಟೆಗೆ ಪ್ರವಚನ

ವಿಷಯ: **ಹರಿವಂಶ**

ಸ್ಥಳ: ಶ್ರೀಮಾಧ್ವಸಂಘ, ರಾಜರಾಜೇಶ್ವರೀನಗರ, ಬೆಂಗಳೂರು

೦೭-೦೧-೧೦, ಸಂಜೆ ೬.೪೫ ಘಂಟೆಗೆ ಪ್ರವಚನ

ವಿಷಯ: **ಶ್ರೀನರಹರಿತೀರ್ಥರು**

ಸ್ಥಳ: ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸಭಾಂಗಣ, ಹನುಮಂತನಗರ, ಬೆಂಗಳೂರು

೦೯-೦೧-೧೦, ಸಂಜೆ ೬.೩೦ ಘಂಟೆಗೆ ಪ್ರವಚನ

ವಿಷಯ: **ಸಾಧಕರಿಗೆ ಹರಿದಾಸರು ನೀಡಿದ ಸಂದೇಶ**

ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೧೦-೦೧-೧೦, ಮಧ್ಯಾಹ್ನ ೬.೩೦ ಘಂಟೆಗೆ ವಿಚಾರಸಂಕಿರಣ

ವಿಷಯ: **ಮೋಕ್ಷಸಾಧನೆಯಲ್ಲಿ ಹರಿದಾಸಸಾಹಿತ್ಯದ ಸ್ಥಾನ**

ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೦-೦೧-೧೦ ರಿಂದ ೨೪-೦೧-೧೦, ಸಂಜೆ ೬.೩೦ ಘಂಟೆಗೆ ಪ್ರವಚನ

ವಿಷಯ: **ಸುಮಧ್ವವಿಜಯ**

ಸ್ಥಳ: ಶ್ರೀರಾಘವೇಂದ್ರಮಠ, ಮಲ್ಕಾಜ್‌ಗಿರಿ, ಹೈದರಾಬಾದ್

೨೫-೦೧-೧೦ ರಿಂದ ೨೭-೦೧-೧೦, ಸಂಜೆ ೬.೩೦ ಘಂಟೆಗೆ ಪ್ರವಚನ

ವಿಷಯ: **ಶ್ರೀವಿಜಯದಾಸರು**

ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೭-೦೧-೧೦, ಸಂಜೆ ೬.೦೦ ಘಂಟೆಗೆ

**(ಕನ್ನಡಲಿಪಿಯ) ಸರ್ವಮೂಲಗ್ರಂಥಗಳ ಬಿಡುಗಡೆ**

ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

*****



## ಶ್ರೀವ್ಯಾಸಮಧ್ವ ಮಾಸಪತ್ರಿಕೆ

ಶ್ರೀವ್ಯಾಸಮಧ್ವ ಮಾಸಪತ್ರಿಕೆಯು ಮಾರ್ಚ್ ೨೦೦೮ ರಿಂದ ಪ್ರಕಾಶನಗೊಳ್ಳುತ್ತಿದೆ. ಶ್ರೀಪಾದರ ಲೇಖನಗಳು, ಬಗೆಬಗೆಯ ಅಪೂರ್ವ ಚಿತ್ರಗಳು, ಮಾಸದ ವಿಶೇಷಗಳು, ಭಗವದ್ರೂಪಗಳ, ಭಗವದ್ಭಕ್ತರ ಚರಿತ್ರೆಗಳು, ವ್ರತ ಉಪವಾಸಗಳ ವಿವರಗಳು, ಜ್ಞಾನಿಗಳ ಕೃತಿಗಳ ಪರಿಚಯ, ಹರಿದಾಸರ ಕೃತಿಗಳ ಬಗ್ಗೆ ಮಾಹಿತಿ ಮೊದಲಾದ ಅನೇಕ ಉಪಯುಕ್ತ ಲೇಖನಗಳಿಂದಾಗಿ ಈಗಾಗಲೇ ಗಣನೀಯ ಸಂಖ್ಯೆಯ ಓದುಗರ ಬಳಗವನ್ನು ಪತ್ರಿಕೆ ಹೊಂದಿದೆ.

ಅನೇಕ ಆಸ್ತಿಕ ಮಹನೀಯರು ಪೋಷಕರು ಮೊದಲಾದ ರೂಪದಲ್ಲಿ ಪತ್ರಿಕೆಯ ಪ್ರಕಾಶನಕ್ಕೆ ನೆರವಾಗುತ್ತಿದ್ದಾರೆ. ಇನ್ನೂ ಅನೇಕರು ತಮ್ಮಿಂದ ಸಾಧ್ಯವಾದ ರೀತಿಯಲ್ಲಿ ನೆರವು ನೀಡಲು ಮುಂದಾಗಿರುವರು. ಅದಕ್ಕೆ ಸಲಹೆ ಹೀಗಿದೆ.

**ಈಗಾಗಲೇ ಚಂದಾದಾರರಾಗಿರುವವರು ಕನಿಷ್ಠ ಇನ್ನೊಬ್ಬ ಚಂದಾದಾರರನ್ನು ಒದಗಿಸಿಕೊಟ್ಟಲ್ಲಿ ಪತ್ರಿಕೆ ಇನ್ನು ಹೆಚ್ಚು ಉಪಯುಕ್ತರೀತಿಯಲ್ಲಿ ಪ್ರಕಾಶನಗೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಉತ್ತಮ ಪ್ರತಿಕ್ರಿಯೆಯನ್ನು ಪತ್ರಿಕೆ ನಿರೀಕ್ಷಿಸುತ್ತದೆ.**


॥ ಹರಿ ಸರ್ವೋತ್ತಮ ॥ ॥ ಶ್ರೀ ವಾಯು ಜೀವೋತ್ತಮ ॥

**Sri Guru Raghavendra Real Estate**

No. 66, 1st Floor, 2nd A Cross, 3rd main,
Srinivasanagar, Bangalore - 560050. Ph: 9341259590

**Consultants for**

BDA Sites, Houses, Sale/Purchase, B.S.K. 6th Stage, Vishveshwaraiah Layout, Anjanapura and other BDA approved Layouts, (Bangalore South).

We also help you in obtaining Khata Cerificate, Tax paid, Building plans from B.B.M.P., B.D.A. and also contact for Registration, Gift Deed and other allied services.

**Contact :** Nagaraj, **Mob:** 9341259590

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್,
ಹನುಮಂತನಗರ, ಬೆಂಗಳೂರು-೧೯. ದೂರವಾಣಿ:
೦೮೦-೨೬೬೦೨೮೦೨/೨೬೬೧೧೦೧೧

## ಕನ್ನಡ ಲಿಪಿಯಲ್ಲಿ
## ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ
# ಸರ್ವಮೂಲಗ್ರಂಥಗಳ
# ಬಿಡುಗಡೆ

**ದಿನಾಂಕ: ೨೬-೦೧-೨೦೧೦ ಸಂಜೆ ೬.೦೦ ಘಂಟೆಗೆ**

**ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು**

**ಸಂಪಾದಕರು:**

**ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ವಿ.ಸೂ.: ೧) ಪ್ರಕಾಶನಪೂರ್ವಬೆಲೆಯನ್ನು ಸಲ್ಲಿಸಿರುವವರು ಅಧಿಕೃತ ರಸೀತಿಯನ್ನು ತೋರಿಸಿ ಅಂದೇ ಗ್ರಂಥಗಳನ್ನು ಪಡೆದುಕೊಳ್ಳಬಹುದು. ಪರ ಊರಿನವರು ನಮ್ಮ ಪ್ರತಿಷ್ಠಾನದ ಕಾರ್ಯಾಲಯವನ್ನು ದಿನಾಂಕ ೨೮.೦೧.೧೦ರ ನಂತರ ಸಂಪರ್ಕಿಸಿ ಪ್ರತಿಗಳನ್ನು ಪಡೆದುಕೊಳ್ಳಬಹುದು.

೨) ರೂ. ೧೫,೦೦೦/- ನೀಡಿ ನಮ್ಮ ಪ್ರತಿಷ್ಠಾನಕ್ಕೆ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಸುಮಧ್ವವಿಜಯ, ಹರಿಕಥಾಮೃತಸಾರ, ಮಹಾಭಾರತತಾತ್ಪರ್ಯನಿರ್ಣಯ ಮೊದಲಾಗಿ ಹಿಂದೆ ಪ್ರಕಾಶಿತವಾದ ಹಾಗೂ ಮುಂದೆ ಪ್ರಕಾಶನಗೊಳ್ಳುವ ಎಲ್ಲ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧) ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨) ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩) 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪) 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫) ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬) ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವ-ಸೇವಾಪ್ರಶಸ್ತಿ'.

೭) ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮) ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯) ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

ವಿಶೇಷ ಸೂಚನೆ : ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.